18

ಉಪವಾಸದ ನಿಯಮಗಳು

ಶೈಖ್ ಅಬ್ದುಲ್ ಅಝೀಝ್ ಅರ್ರಾಜಿಹೀ

مدرسة الصفة الإسلامية

MADRASATU SUFFAH AL ISLAMIYYA

SKYWAY COMPLEX, 6TH BLOCK, KRISHNAPURA,
SURATKAL, MANGALORE - 575 014
PH: 0824-2271449 MOB: 8722695551

ಒಳಪುಟಗಳಲ್ಲಿ...

1. ರಮದಾನ್ ತಿಂಗಳ ಒಂದು ಅಥವಾ ಎರಡು ದಿನ ಮುಂಚೆ ಉಪವಾಸ ಆರಂಭಿಸುವುದು 5
2. ಕಡ್ಡಾಯ ಉಪವಾಸಕ್ಕೆ ರಾತ್ರಿ ನಿಯ್ಯತ್ ಮಾಡುವುದು 8
3. ಎರಡನೆ ಪ್ರಭಾತ ಸ್ಪಷ್ಟವಾದ ಬಳಿಕ ಆಹಾರ–ಪಾನೀಯ ಸೇವಿಸುವುದು 10
4. ಉಪವಾಸವಿರುವಾಗ ಮರೆತು ಆಹಾರ–ಪಾನೀಯ ಸೇವಿಸುವುದು 12
5. ಉಪವಾಸವಿರುವಾಗ ಸಂಭೋಗ ಮಾಡುವುದು . 14
6. ಉಪವಾಸ ಹಿಡಿದು ಹಗಲು ಪೂರ್ತಿ ನಿದ್ದೆ ಮಾಡುವುದು... 19
7. ಉಪವಾಸವಿರುವಾಗ ಸ್ವಪ್ನಸ್ಖಲನವಾಗುವುದು 20
8. ಪ್ರಭಾತವಾದ ನಂತರ ಜನಾಬತ್ ಸ್ನಾನ ಮಾಡುವುದು... 21
9. ಯಾತ್ರೆಯಲ್ಲಿ ಉಪವಾಸ ಆಚರಿಸುವುದು 25
10. ರೋಗಿಯ ಉಪವಾಸ 28
11. ಉಪವಾಸವಿರುವಾಗ ಅಶ್ಲೀಲ ಮಾತುಗಳನ್ನಾಡುವು-ದು 31

12. ಇಫ್ತಾರ್ ಮಾಡಲು ಆತುರಪಡುವುದು.............. 37
13. ಸಹರಿಯನ್ನು ತಡಮಾಡುವುದು...................... 40
14. ಉಪವಾಸವಿರುವಾಗ ಪತ್ನಿಯನ್ನು ಚುಂಬಿಸುವುದು 43
15. ಉಪವಾಸವಿರುವಾಗ ಸ್ನಾನ ಮಾಡುವುದು ಮತ್ತು ಬಾಯಿ ಮುಕ್ಕಳಿಸುವುದು.............................. 50
16. ಪ್ರಭಾತವಾಗಿದೆಯೋ ಇಲ್ಲವೋ ಎಂಬ ಸಂಶಯ-ದಿಂದ ಆಹಾರ–ಪಾನೀಯ ಸೇವಿಸುವುದು......... 51
17. ರಮದಾನ್ ತಿಂಗಳಲ್ಲಿ ಹಗಲಿನ ವೇಳೆ ಯಾರಾದರೂ ಆಹಾರ–ಪಾನೀಯ ಸೇವಿಸುವುದು ಕಂಡರೆ ಏನು ಮಾಡಬೇಕು?.. 52
18. ವೃದ್ಧರ ಉಪವಾಸ.. 54
19. ಉಪವಾಸವಿರುವಾಗ ಸ್ನಾನ ಮಾಡುವುದು......... 56
20. ಉಪವಾಸವಿರುವಾಗ ಬಾಯಿ ಮುಕ್ಕಳಿಸುವುದು ಮತ್ತು ಮೂಗಿಗೆ ನೀರೆಳೆಯುವುದು 58
21. ಉಪವಾಸವಿರುವಾಗ ಸೂಜಿ ಚುಚ್ಚುವುದು 60
22. ಉಪವಾಸವಿರುವಾಗ ಲೋಬಾನ ಉರಿಸುವುದು. 62
23. ಉಪವಾಸವಿರುವಾಗ ಉದ್ದೇಶಪೂರ್ವಕ ವಾಂತಿ ಮಾಡುವುದು... 63
24. ಉಪವಾಸವಿರುವಾಗ ಹಲ್ಲುಜ್ಜುವುದು 66

25. ಧರ್ಮಪರಿತ್ಯಾಗ ಮಾಡಿದವನ ಉಪವಾಸ......... **68**
26. ಉಪವಾಸ ತೊರೆಯುತ್ತೇನೆಂದು ನಿಯ್ಯತ್ ಮಾಡುವುದು.. **70**
27. ಋತುಸ್ರಾವವಿರುವವರ ಮತ್ತು ಹೆರಿಗೆ ರಕ್ತವಿರುವ-ವರ ಉಪವಾಸ... **73**
28. ಹಿಜಾಮ ಮಾಡುವುದು.................................. **79**
29. ರಮದಾನ್ ತಿಂಗಳ ಚಂದ್ರದರ್ಶನವಾಯಿತೆಂದು ಹಗಲಿನ ವೇಳೆಯಲ್ಲಿ ತಿಳಿದು ಬಂದರೆ ಏನು ಮಾಡಬೇಕು?.. **84**
30. ಉಪವಾಸ ಬಾಕಿಯಿರುವವರು ಮರಣಹೊಂದಿದರೆ ಏನು ಮಾಡಬೇಕು?.................................... **88**

1. ರಮದಾನ್ ತಿಂಗಳ ಒಂದು ಅಥವಾ ಎರಡು ದಿನ ಮುಂಚೆ ಉಪವಾಸ ಆರಂಭಿಸುವುದು

ರಮದಾನ್ ತಿಂಗಳ ಬಗ್ಗೆ ಸೂಕ್ಷ್ಮತೆ ಪಾಲಿಸುವುದಕ್ಕಾಗಿ ಕೆಲವರು ರಮದಾನ್ ತಿಂಗಳ ಒಂದು ಅಥವಾ ಎರಡು ದಿನ ಮುಂಚೆ (ಅಂದರೆ ಶಅ್‌ಬಾನ್ ತಿಂಗಳ 29 ಅಥವಾ 30ನೇ ದಿನ) ಉಪವಾಸ ಆಚರಿಸಲು ಆರಂಭಿಸುತ್ತಾರೆ. ಇದು ನಿಷಿದ್ಧವಾಗಿದೆ. ಆದರೆ ಒಬ್ಬರು ರೂಢಿಯಾಗಿ ಉಪವಾಸ ಆಚರಿಸುತ್ತಿದ್ದು ಆ ಉಪವಾಸ ಆ ದಿನಗಳಲ್ಲಿ (ಅಂದರೆ ಶಅ್‌ಬಾನ್ ತಿಂಗಳ 29 ಅಥವಾ 30ನೇ ದಿನದಲ್ಲಿ) ಬಂದರೆ ಮತ್ತು ಉಪವಾಸ ಆಚರಿಸುವುದು ರಮದಾನ್ ತಿಂಗಳ ಬಗ್ಗೆ ಸೂಕ್ಷ್ಮತೆ ಪಾಲಿಸುವುದಕ್ಕೆ ಅಲ್ಲ ಎಂದಾದರೆ ಆ ದಿನಗಳಲ್ಲಿ ಉಪವಾಸ ಆಚರಿಸುವುದಕ್ಕೆ ವಿರೋಧವಿಲ್ಲ.

ಉದಾಹರಣೆಗೆ, ಒಬ್ಬರು ಪ್ರತಿ ಸೋಮವಾರ ಮತ್ತು ಗುರುವಾರ ಉಪವಾಸ ಆಚರಿಸುತ್ತಾರೆ. ಹೀಗಿರುವಾಗ

ಆ ಸೋಮವಾರ ಅಥವಾ ಗುರುವಾರದ ಉಪವಾಸ-ವು ಶಅ್‌ಬಾನ್ ತಿಂಗಳ ಕೊನೆಯಲ್ಲಿ ಬಂದರೆ ಅಂದು ಉಪವಾಸ ಆಚರಿಸುವುದಕ್ಕೆ ವಿರೋಧವಿಲ್ಲ. ಹಾಗೆಯೇ ಹರಕೆಯ ಉಪವಾಸ, ಪ್ರಾಯಶ್ಚಿತ್ತದ ಉಪವಾಸ ಅಥವಾ ಕಳೆದ ವರ್ಷದ ರಮದಾನ್ ತಿಂಗಳಲ್ಲಿ ಬಿಟ್ಟು-ಹೋದ ಉಪವಾಸ ಮುಂತಾದ ಕಡ್ಡಾಯ ಉಪವಾಸ-ಗಳನ್ನು ಆ ದಿನದಲ್ಲಿ ಆಚರಿಸಬಹುದು.

ಸಹೀಹುಲ್ ಬುಖಾರಿ ಮತ್ತು ಸಹೀಹ್ ಮುಸ್ಲಿಮ್‌ನಲ್ಲಿ-ರುವ ಅಬೂ ಹುರೈರ(﵁) ವರದಿ ಮಾಡಿದ ಹದೀಸಿನಲ್ಲಿ ಪ್ರವಾದಿ(ﷺ) ಯವರು ಹೇಳುತ್ತಾರೆ:

«لَا يَتَقَدَّمَنَّ أَحَدُكُمْ رَمَضَانَ بِصَوْمِ يَوْمٍ أَوْ يَوْمَيْنِ، إِلَّا أَنْ يَكُونَ رَجُلٌ كَانَ يَصُومُ صَوْمَهُ، فَلْيَصُمْ ذَلِكَ».

"ನಿಮ್ಮಲ್ಲಿ ಯಾರೂ ಕೂಡ ರಮದಾನ್ ತಿಂಗಳ ಒಂದು ಅಥವಾ ಎರಡು ದಿನ ಮುಂಚೆ ಉಪವಾಸ ಆರಂಭಿಸ-ಬಾರದು. (ರೂಢಿಯಾಗಿ) ಉಪವಾಸ ಆಚರಿಸುವವರ ಹೊರತು. ಅವರು ಆ ದಿನ ಉಪವಾಸ ಆಚರಿಸಬ-ಹುದು."[1]

ಸಹೀಹ್ ಮುಸ್ಲಿಮ್‌ನಲ್ಲಿರುವ ವರದಿ ಹೀಗಿದೆ:

«لَا تُقَدِّمُوا رَمَضَانَ بِصَوْمِ يَوْمٍ وَلَا يَوْمَيْنِ، إِلَّا رَجُلٌ كَانَ يَصُومُ صَوْمًا فَلْيَصُمْهُ».

"ನೀವು ರಮದಾನ್ ತಿಂಗಳ ಒಂದು ಅಥವಾ ಎರಡು ದಿನ ಮುಂಚೆ ಉಪವಾಸ ಆರಂಭಿಸಬಾರದು. (ರೂಢಿಯಾಗಿ) ಉಪವಾಸ ಆಚರಿಸುವವರ ಹೊರತು. ಅವರು ಆ ದಿನ ಉಪವಾಸ ಆಚರಿಸಬಹುದು."[2]

1 ಅಲ್‌ಬುಖಾರಿ. ನೋಡಿ: ಫತ್‌ಹುಲ್ ಬಾರಿ 4/128
2 ಮುಸ್ಲಿಂ. ನೋಡಿ: ಶರ್ಹ್ ನ್ನವವೀ ಅಲಾ ಮುಸ್ಲಿಮ್ 7/194

2. ಕಡ್ಡಾಯ ಉಪವಾಸಕ್ಕೆ ರಾತ್ರಿ ನಿಯ್ಯತ್ ಮಾಡುವುದು

ಕಡ್ಡಾಯ ಉಪವಾಸಕ್ಕೆ ರಾತ್ರಿ ನಿಯ್ಯತ್ ಮಾಡುವುದು ಕಡ್ಡಾಯವಾಗಿದೆ. ರಾತ್ರಿ ನಿಯ್ಯತ್ ಮಾಡದಿದ್ದರೆ ಕಡ್ಡಾಯ ಉಪವಾಸವು ಸಿಂಧುವಾಗುವುದಿಲ್ಲ. ಕಾರಣ, ಪ್ರವಾದಿ(ﷺ) ಯವರು ಹೇಳುತ್ತಾರೆ:

«مَنْ لَمْ يُبَيِّتِ الصِّيَامَ قَبْلَ طُلُوعِ الْفَجْرِ فَلَا صِيَامَ لَهُ».

"ಯಾರು ಪ್ರಭಾತೋದಯಕ್ಕೆ ಮುಂಚೆಯೇ ಉಪವಾ-ಸಕ್ಕೆ ನಿಯ್ಯತ್ ಮಾಡುವುದಿಲ್ಲವೋ ಅವರಿಗೆ ಉಪವಾ-ಸವಿಲ್ಲ. (ಅವರ ಉಪವಾಸ ಸಿಂಧುವಲ್ಲ)."

ಇನ್ನೊಂದು ವರದಿಯಲ್ಲಿ ಹೀಗಿದೆ:

«مَنْ لَمْ يُبَيِّتِ الصِّيَامَ مِنَ اللَّيْلِ فَلَا صِيَامَ لَهُ».

"ಯಾರು ಉಪವಾಸಕ್ಕೆ ರಾತ್ರಿಯೇ ನಿಯ್ಯತ್ ಮಾಡುವುದಿಲ್ಲವೋ ಅವರಿಗೆ ಉಪವಾಸವಿಲ್ಲ. (ಅವರ ಉಪವಾಸ ಸಿಂಧುವಲ್ಲ)."

ಇನ್ನೊಂದು ವರದಿಯಲ್ಲಿ ಹೀಗಿದೆ:

«مَنْ لَمْ يُجْمِعِ الصِّيَامَ قَبْلَ الْفَجْرِ فَلَا صِيَامَ لَهُ».

"ಯಾರು ಪ್ರಭಾತಕ್ಕೆ ಮುಂಚೆಯೇ ಉಪವಾಸಕ್ಕೆ ನಿಯ್ಯತ್ ಮಾಡುವುದಿಲ್ಲವೋ ಅವರಿಗೆ ಉಪವಾಸವಿಲ್ಲ. (ಅವರ ಉಪವಾಸ ಸಿಂಧುವಲ್ಲ)."[3]

3 ಅನ್ನಸಾಈ 4/166-168; ಅಬೂದಾವೂದ್ 1/571; ಅತ್ತಿರ್ಮಿದಿ, ನೋಡಿ: ಅಲ್‌ಅಹ್ವದೀ 3/263; ಅದ್ದಾರಿಮೀ

ಅದೇ ರೀತಿ ಸಹೀಹುಲ್ ಬುಖಾರಿ ಮತ್ತು ಸಹೀಹ್ ಮುಸ್ಲಿಮ್‌ನಲ್ಲಿರುವ ಉಮರ್ ಇಬ್ನುಲ್ ಖತ್ತಾಬ್(﵁) ರವರ ಹದೀಸಿನಲ್ಲಿ ಪ್ರವಾದಿ(ﷺ) ಯವರು ಹೇಳುತ್ತಾರೆ:

«إِنَّمَا الْأَعْمَالُ بِالنِّيَّاتِ، وَإِنَّمَا لِكُلِّ امْرِءٍ مَا نَوَى».

"ನಿಯ್ಯತ್‌ಗಳನ್ನು ಅವಲಂಬಿಸಿ ಕರ್ಮಗಳಿಗೆ ಪ್ರತಿಫಲ ಸಿಗುತ್ತದೆ. ಪ್ರತಿಯೊಬ್ಬ ವ್ಯಕ್ತಿಗೂ ಅವನು ನಿಯ್ಯತ್ ಮಾಡಿದ್ದು ಮಾತ್ರ ಸಿಗುತ್ತದೆ."

3. ಎರಡನೆ ಪ್ರಭಾತ ಸ್ಪಷ್ಟವಾದ ಬಳಿಕ ಆಹಾರ–ಪಾನೀಯ ಸೇವಿಸುವುದು

'ಅಲ್‌ಫಜ್ರು ಸ್ಸಾನೀ' (ಎರಡನೆ ಪ್ರಭಾತ. ಇದನ್ನು ಅಲ್‌ಫಜ್ರು ಸ್ಸಾದಿಕ್ ಎಂದು ಸಹ ಕರೆಯುತ್ತಾರೆ) ಸ್ಪಷ್ಟ-

2/7 ಮತ್ತು ಅಹ್ಮದ್ 6/287

ವಾದ ಬಳಿಕ (ಪ್ರಭಾತವಾಯಿತೆಂದು ಸ್ಪಷ್ಟವಾದ ಬಳಿಕ) ಆಹಾರ ಪಾನೀಯಗಳನ್ನು ಸೇವಿಸುವುದು ನಿಷಿದ್ಧವಾಗಿದೆ. ಆದ್ದರಿಂದ ಯಾವುದೇ ವಿನಾಯಿತಿಯಿಲ್ಲದವರು, ಉಪವಾಸಿಗನೆಂದು ಅರಿತಿದ್ದೂ ಸಹ ಪ್ರಜ್ಞಾಪೂರ್ವಕ ಆಹಾರ–ಪಾನೀಯ ಸೇವಿಸಿದರೆ ಅವರ ಉಪವಾಸ ಅಸಿಂಧುವಾಗುತ್ತದೆ. ಕಾರಣ, ಅಲ್ಲಾಹು ಹೇಳುತ್ತಾನೆ:

﴿وَكُلُوا۟ وَٱشْرَبُوا۟ حَتَّىٰ يَتَبَيَّنَ لَكُمُ ٱلْخَيْطُ
ٱلْأَبْيَضُ مِنَ ٱلْخَيْطِ ٱلْأَسْوَدِ مِنَ ٱلْفَجْرِ ۖ﴾

“ಪ್ರಭಾತದ ಬಿಳಿ ನೂಲು ಮತ್ತು ಕಪ್ಪು ನೂಲು ಸ್ಪಷ್ಟವಾಗಿ ತಿಳಿಯುವ ತನಕ ತಿನ್ನಿರಿ ಮತ್ತು ಕುಡಿಯಿರಿ.”[4]

ಪ್ರಭಾತವಾದ ಬಳಿಕ ಪ್ರಜ್ಞಾಪೂರ್ವಕ ಆಹಾರ ಸೇವಿಸಿದವರು ಪ್ರಾಮಾಣಿಕ ಪಶ್ಚಾತ್ತಾಪ, ವಿಷಾದ ಮತ್ತು ತಮ್ಮ ತಪ್ಪನ್ನು ಸಂಪೂರ್ಣ ಒಪ್ಪಿಕೊಂಡು ಅಲ್ಲಾಹನಲ್ಲಿ

4 ಕುರ್‌ಆನ್ 2:187

ಕ್ಷಮೆಯಾಚಿಸಬೇಕು ಮತ್ತು ಆ ದಿನದ ಉಪವಾಸವನ್ನು ಕಝಾ ನಿರ್ವಹಿಸಬೇಕು.

4. ಉಪವಾಸವಿರುವಾಗ ಮರೆತು ಆಹಾರ–ಪಾನೀಯ ಸೇವಿಸುವುದು

ಉಪವಾಸವಿರುವಾಗ ಮರೆತು ಆಹಾರ–ಪಾನೀಯ ಸೇವಿಸಿದರೆ ಉಪವಾಸ ಸಿಂಧುವಾಗುತ್ತದೆ. ವಿದ್ವಾಂಸರ ಎರಡಭಿಪ್ರಾಯಗಳಲ್ಲಿ ಅತ್ಯಂತ ಸಹೀಹಾದ ಅಭಿಪ್ರಾಯದ ಪ್ರಕಾರ ಆ ಉಪವಾಸವನ್ನು ಕಝಾ ನಿರ್ವಹಿಸಬೇಕಾಗಿಲ್ಲ. ಕಾರಣ, ಮರೆವಿನ ಮೇಲೆ ಮನುಷ್ಯನಿಗೆ ನಿಯಂತ್ರಣವಿಲ್ಲ. ಸಹೀಹುಲ್ ಬುಖಾರಿ ಮತ್ತು ಸಹೀಹ್ ಮುಸ್ಲಿಮ್‌ನಲ್ಲಿರುವ ಅಬೂ ಹುರೈರ(ﷺ) ರವರ ಹದೀಸಿನಲ್ಲಿ ಪ್ರವಾದಿ(ﷺ) ಯವರು ಹೇಳುತ್ತಾರೆ:

«إِذَا نَسِيَ فَأَكَلَ أَوْ شَرِبَ فَلْيُتِمَّ صَوْمَهُ. فَإِنَّمَا أَطْعَمَهُ اللَّهُ وَسَقَاهُ».

"ಮರೆತು ಆಹಾರ ಅಥವಾ ಪಾನೀಯ ಸೇವಿಸಿದವರು ತಮ್ಮ ಉಪವಾಸವನ್ನು ಪೂರ್ತಿ ಮಾಡಿಕೊಳ್ಳಲಿ. ಏಕೆಂದರೆ ಅವರಿಗೆ ಆಹಾರ–ಪಾನೀಯ ನೀಡಿದ್ದು ಅಲ್ಲಾಹು."[5]

ಸಹೀಹ್ ಮುಸ್ಲಿಮ್‌ನಲ್ಲಿರುವ ವರದಿಯಲ್ಲಿ ಹೀಗಿದೆ:

«مَنْ نَسِيَ وَهُوَ صَائِمٌ فَأَكَلَ أَوْ شَرِبَ فَلْيُتِمَّ صَوْمَهُ. فَإِنَّمَا أَطْعَمَهُ اللَّهُ وَسَقَاهُ».

"ಉಪವಾಸವಿರುವಾಗ ಯಾರಾದರೂ ಮರೆತು ಆಹಾರ–ಪಾನೀಯ ಸೇವಿಸಿದರೆ ಅವರು ತಮ್ಮ ಉಪವಾಸವನ್ನು ಪೂರ್ತಿ ಮಾಡಲಿ. ಏಕೆಂದರೆ ಅವರಿಗೆ ಆಹಾರ–ಪಾನೀಯ ನೀಡಿದ್ದು ಅಲ್ಲಾಹು."[6]

---

5 ಅಲ್‌ಬುಖಾರಿ. ನೋಡಿ: ಫತ್‌ಹುಲ್ ಬಾರಿ 4/155

6 ಮುಸ್ಲಿಂ. ನೋಡಿ: ಶರ್ಹು ನ್ನವವೀ ಅಲಾ ಮುಸ್ಲಿಮ್ 8/35

ಹದೀಸಿನಲ್ಲಿರುವಂತೆ ಮರೆತು ಆಹಾರ–ಪಾನೀಯ ಸೇವಿಸಿದವರು ಆ ಉಪವಾಸವನ್ನು ಕಝಾ ನಿರ್ವಹಿಸಬೇಕಾಗಿಲ್ಲ. ಇದು ಬಹುಸಂಖ್ಯಾತ ವಿದ್ವಾಂಸರ ಅಭಿಪ್ರಾಯವಾಗಿದೆ. ಆದರೆ ಇಮಾಂ ಮಾಲಿಕ್(ﷺ) "ಆ ಉಪವಾಸ ಅಸಿಂಧುವಾಗಿದೆ. ಅದನ್ನು ಕಝಾ ನಿರ್ವಹಿಸ ಬೇಕು" ಎನ್ನುತ್ತಾರೆ. ಇಮಾಮ್ ದಾವದೀ(ﷺ) ಹೇಳುವಂತೆ ಬಹುಶಃ ಇಮಾಂ ಮಾಲಿಕ್‌ರಿಗೆ ಈ ಹದೀಸ್ ಸಿಗದಿರಬಹುದು.[7]

5. ಉಪವಾಸವಿರುವಾಗ ಸಂಭೋಗ ಮಾಡುವುದು

ರಮದಾನ್ ತಿಂಗಳಲ್ಲಿ ಹಗಲು ಹೊತ್ತಿನಲ್ಲಿ, ಸಂಭೋಗ ಮಾಡಬಾರದೆಂಬ ತಿಳುವಳಿಕೆಯಿದ್ದೂ ಸಹ ಯಾರಾದರೂ ಪ್ರಜ್ಞಾಪೂರ್ವಕ ಸಂಭೋಗ ಮಾಡಿದರೆ ಅವರ ಉಪವಾಸವು ಅಸಿಂಧುವಾಗುತ್ತದೆ. ಅವರು ಹೃದಯಾಳದಿಂದ ತೌಬಾ ಮಾಡಬೇಕು,

7 ನೋಡಿ: ಫತ್‌ಹುಲ್ ಬಾರಿ 4/155

ವಿಷಾದಪಡಬೇಕು ಮತ್ತು ತಮ್ಮ ತಪ್ಪನ್ನು ಸಂಪೂರ್ಣ ಒಪ್ಪಿಕೊಂಡು ಅಲ್ಲಾಹನಲ್ಲಿ ಕ್ಷಮೆಯಾಚಿಸಬೇಕು. ಮಾತ್ರವಲ್ಲ, ಆ ಉಪವಾಸವನ್ನು ಕಝಾ ನಿರ್ವಹಿಸಬೇಕು. ಅದರ ಜೊತೆಗೆ ಸಂಭೋಗ ಮಾಡಿದ್ದಕ್ಕೆ ಪ್ರಾಯಶ್ಚಿತ್ತ ನೀಡುವುದು ಕೂಡ ಕಡ್ಡಾಯವಾಗಿದೆ. ಪ್ರಾಯಶ್ಚಿತ್ತವು ಒಬ್ಬ ಗುಲಾಮನನ್ನು ದಾಸ್ಯಮುಕ್ತಗೊಳಿಸುವುದು. ಅದು ಸಾಧ್ಯವಾಗದಿದ್ದರೆ ಎರಡು ತಿಂಗಳು ನಿರಂತರ ಉಪವಾಸ ಆಚರಿಸುವುದು. ಅದೂ ಸಾಧ್ಯವಾಗದಿದ್ದರೆ 60 ಬಡವರಿಗೆ ಆಹಾರ ನೀಡುವುದು. ಸಹೀಹುಲ್ ಬುಖಾರಿ ಮತ್ತು ಸಹೀಹ್ ಮುಸ್ಲಿಮ್‌ನಲ್ಲಿರುವ ಅಬೂ ಹುರೈರ (ﷺ) ರವರ ಹದೀಸಿನಲ್ಲಿ ಹೀಗಿದೆ:

ಒಮ್ಮೆ ನಾವು ಪ್ರವಾದಿ(ﷺ) ಯವರ ಬಳಿ ಕುಳಿತಿದ್ದಾಗ ಒಬ್ಬ ವ್ಯಕ್ತಿ ಬಂದು ಹೇಳಿದರು: "ಓ ಅಲ್ಲಾಹನ ಸಂದೇಶವಾಹಕರೇ! ನಾನು ನಾಶವಾಗಿ ಹೋದೆ!" ಪ್ರವಾದಿ(ﷺ) ಯವರು ಕೇಳಿದರು: "ಏಕೆ? ಏನಾಯಿತು?"

ಮುಸ್ಲಿಮ್‌ನಲ್ಲಿರುವ ವರದಿಯಲ್ಲಿ ಹೀಗಿದೆ: "ನಿನ್ನನ್ನು ನಾಶ ಮಾಡಿದ್ದು ಏನು?" ಆ ವ್ಯಕ್ತಿ ಹೇಳಿದರು: "ನಾನು ಉಪವಾಸದಲ್ಲಿದ್ದು ನನ್ನ ಪತ್ನಿಯೊಡನೆ ಸಂಭೋಗ ಮಾಡಿದೆ."

ಮುಸ್ಲಿಮ್‌ನಲ್ಲಿರುವ ವರದಿಯಲ್ಲಿ ಹೀಗಿದೆ: "ನಾನು ರಮದಾನ್ ತಿಂಗಳಲ್ಲಿ ನನ್ನ ಪತ್ನಿಯೊಂದಿಗೆ ಸಂಭೋಗ ಮಾಡಿದೆ." ಆಗ ಪ್ರವಾದಿ(ﷺ) ಯವರು ಕೇಳಿದರು: "ನಿನಗೆ ಒಬ್ಬ ಗುಲಾಮನನ್ನು ಸ್ವತಂತ್ರಗೊಳಿಸುವ ಸಾಮರ್ಥ್ಯವಿದೆಯಾ?" ಆ ವ್ಯಕ್ತಿ ಇಲ್ಲವೆಂದರು. ಪ್ರವಾದಿ (ﷺ) ರವರು ಕೇಳಿದರು: "ನಿನಗೆ ಎರಡು ತಿಂಗಳು ನಿರಂತರ ಉಪವಾಸ ಆಚರಿಸಲು ಸಾಧ್ಯವೇ?" ಆ ವ್ಯಕ್ತಿ ಅದಕ್ಕೂ ಇಲ್ಲವೆಂದರು. ಪ್ರವಾದಿ(ﷺ) ಯವರು ಕೇಳಿದರು: "60 ಬಡವರಿಗೆ ಆಹಾರ ನೀಡುವ ಸಾಮರ್ಥ್ಯವಾದರೂ ನಿನ್ನಲ್ಲಿದೆಯಾ?" ಆ ವ್ಯಕ್ತಿ ಅದಕ್ಕೂ ಇಲ್ಲವೆಂದರು. ಆಗ ಪ್ರವಾದಿ(ﷺ) ಯವರು ಮೌನರಾ-

ದರು. ನಾವು ಸ್ವಲ್ಪ ಹೊತ್ತು ಹಾಗೆಯೇ ಕುಳಿತಿರುವಾಗ ಯಾರೋ ಒಂದು ಬುಟ್ಟಿ ಖರ್ಜೂರವನ್ನು ಪ್ರವಾದಿ(ﷺ) ಯವರಿಗೆ ಉಡುಗೊರೆಯಾಗಿ ಕೊಟ್ಟರು. ಪ್ರವಾದಿ(ﷺ) ಯವರು ಕೇಳಿದರು: "ಪ್ರಶ್ನೆ ಕೇಳಿದ ಆ ವ್ಯಕ್ತಿ ಎಲ್ಲಿ?" ಆ ವ್ಯಕ್ತಿ ಹೇಳಿದರು: "ಇಲ್ಲಿದ್ದೇನೆ." ಪ್ರವಾದಿ(ﷺ) ಯವರು ಆ ವ್ಯಕ್ತಿಯೊಡನೆ ಹೇಳಿದರು: "ಈ ಬುಟ್ಟಿಯನ್ನು ತಗೊಂಡು ಹೋಗಿ ಅದರಲ್ಲಿರುವ ಖರ್ಜೂರವನ್ನು ಬಡವರಿಗೆ ದಾನ ಮಾಡು." ಆ ವ್ಯಕ್ತಿ ಕೇಳಿದರು: "ಓ ಅಲ್ಲಾಹನ ಸಂದೇಶವಾಹಕರೇ! ನನಗಿಂತ ಬಡವರಿಗೆ ದಾನ ಮಾಡಬೇಕೇ? ಅಲ್ಲಾಹನ ಮೇಲಾಣೆ! ಮದೀನದ ಈ ಎರಡು ಕಣಿವೆಗಳ ಮಧ್ಯೆ ನನಗಿಂತಲೂ ಬಡತನದ-ಲ್ಲಿರುವ ಬೇರೆ ಮನೆಯಿಲ್ಲ."

ಆಗ ಪ್ರವಾದಿ(ﷺ) ಯವರು ತಮ್ಮ ದವಡೆ ಹಲ್ಲು ಕಾಣುವಂತೆ ನಕ್ಕು ಹೇಳಿದರು: "ಅದನ್ನು ನಿನ್ನ ಮನೆ-

ಯವರಿಗೆ ತಿನ್ನಿಸು."[8]

ಧಾರ್ಮಿಕ ನಿಯಮಗಳನ್ನು ಪಾಲಿಸಲು ಬದ್ಧನಾಗಿರುವ, ಯಾತ್ರಿಕನಲ್ಲದ, ವಿವೇಚನಾಶಕ್ತಿಯಿರುವ ಉಪವಾಸಿಗನು ತಿಳುವಳಿಕೆಯಿದ್ದೂ ಸಹ, ರಮದಾನ್ ತಿಂಗಳ ಹಗಲಲ್ಲಿ ಪ್ರಜ್ಞಾಪೂರ್ವಕ ಸಂಭೋಗ ಮಾಡುವುದು ಮಹಾಪಾಪವಾಗಿದೆಯೆಂದು ಈ ಹದೀಸಿನಲ್ಲಿ ಸೂಚಿಸಲಾಗಿದೆ. ಏಕೆಂದರೆ "ನಾನು ನಾಶವಾಗಿ ಹೋದೆ" ಎಂದು ಆ ವ್ಯಕ್ತಿ ಹೇಳಿದ್ದನ್ನು ಪ್ರವಾದಿ(ﷺ) ಯವರು ಅಂಗೀಕರಿಸಿದ್ದಾರೆ. ಸಹೀಹ್ ಗ್ರಂಥದಲ್ಲಿರುವ ಆಯಿಶಾ (رضي الله عنها) ರವರು ವರದಿ ಮಾಡಿದ ಹದೀಸಿನಲ್ಲಿ "ನಾನು ಸುಟ್ಟು ಹೋದೆ" ಎಂದು ಆ ವ್ಯಕ್ತಿ ಹೇಳಿದ್ದಾಗಿ ವರದಿಯಾಗಿದೆ.[9]

8 ಅಲ್‌ಬುಖಾರಿ. ನೋಡಿ: ಫತ್‌ಹುಲ್ ಬಾರಿ 4/163; ಮುಸ್ಲಿಂ. ನೋಡಿ: ಶರ್ಹು ನ್ನವವೀ ಅಲಾ ಮುಸ್ಲಿಮ್ 7/25

9 ಫತ್‌ಹುಲ್ ಬಾರಿ 4/161

ಪ್ರಾಯಶ್ಚಿತ್ತವನ್ನು ಅನುಕ್ರಮವಾಗಿ ನೀಡಬೇಕೆಂದು ಈ ಹದೀಸಿನಲ್ಲಿ ಸೂಚನೆಯಿದೆ. (ಅಂದರೆ ಗುಲಾಮ ವಿಮೋಚನೆ ಮಾಡಲು ಸಾಧ್ಯವಿಲ್ಲದವರು ಎರಡು ತಿಂಗಳು ನಿರಂತರ ಉಪವಾಸ ಆಚರಿಸಬೇಕು. ಅದೂ ಸಾಧ್ಯವಿಲ್ಲದವರು 60 ಬಡವರಿಗೆ ಅನ್ನದಾನ ಮಾಡಬೇಕು). ಆದರೆ ಉಲಮಾಗಳ ಎರಡಭಿಪ್ರಾಯ-ಗಳಲ್ಲಿ ಅತ್ಯಂತ ಸಹೀಹ್ ಆಗಿರುವ ಅಭಿಪ್ರಾಯ ಪ್ರಕಾರ ಯಾರಾದರೂ ಮರೆತು ಸಂಭೋಗ ಮಾಡಿದರೆ ಅವರ ಉಪವಾಸವು ಸಿಂಧುವಾಗುತ್ತದೆ. ಅದನ್ನು ಕಝಾ ನಿ-ರ್ವಹಿಸಬೇಕಾಗಿಲ್ಲ. ಅದಕ್ಕೆ ಪ್ರಾಯಶ್ಚಿತ್ತವನ್ನೂ ನೀಡ-ಬೇಕಾಗಿಲ್ಲ.

6. ಉಪವಾಸ ಹಿಡಿದು ಹಗಲು ಪೂರ್ತಿ ನಿದ್ದೆ ಮಾಡುವುದು

ಉಪವಾಸವಿದ್ದು ಹಗಲು ಪೂರ್ತಿ ನಿದ್ದೆ ಮಾಡಿದರೆ ಉಪವಾಸ ಸಿಂಧುವಾಗುತ್ತದೆ. ಏಕೆಂದರೆ ನಿದ್ದೆಯಿಂದ

ಇಂದ್ರಿಯಾನುಭವ (ಇಹ್ಲಾಸ್) ನಿವಾರಣೆಯಾಗುವುದಿಲ್ಲ. ಆದರೆ ಹಗಲು ಪೂರ್ತಿ ಪ್ರಜ್ಞೆ ತಪ್ಪಿ ಬಿದ್ದರೆ ಆ ದಿನದ ಉಪವಾಸವನ್ನು ಕರ್ಝಾ ನಿರ್ವಹಿಸಬೇಕು. ಕಾರಣ, ಪ್ರಜ್ಞೆ ತಪ್ಪುವುದರಿಂದ ಇಂದ್ರಿಯಾನುಭವ ಸಂಪೂರ್ಣ ನಿವಾರಣೆಯಾಗುತ್ತದೆ.

7. ಉಪವಾಸವಿರುವಾಗ ಸ್ವಪ್ನಸ್ಖಲನವಾಗುವುದು

ಉಪವಾಸವಿರುವಾಗ ಹಗಲು ಹೊತ್ತಿನಲ್ಲಿ ಸ್ವಪ್ನಸ್ಖಲನವಾದರೆ ಕಡ್ಡಾಯ ಸ್ನಾನ ಮಾಡಬೇಕು. ಸ್ವಪ್ನಸ್ಖಲನದಿಂದ ಉಪವಾಸ ಅಸಿಂಧುವಾಗುವುದಿಲ್ಲ. ಕಾರಣ, ಅದು ಸ್ವಇಚ್ಛೆಯಿಂದ ಸಂಭವಿಸಿದ್ದಲ್ಲ. ಅಲ್ಲಾಹು ಹೇಳುತ್ತಾನೆ:

﴿لَا يُكَلِّفُ ٱللَّهُ نَفْسًا إِلَّا وُسْعَهَا﴾

“ಒಬ್ಬ ವ್ಯಕ್ತಿಯ ಮೇಲೆ ಅವನ ಸಾಮರ್ಥ್ಯಕ್ಕಿಂತಲೂ ಹೆ-

ಚ್ಚಿನದ್ದನ್ನು ಅಲ್ಲಾಹು ಕಡ್ಡಾಯಗೊಳಿಸುವುದಿಲ್ಲ."[10]

8. ಪ್ರಭಾತವಾದ ನಂತರ ಜನಾಬತ್ ಸ್ನಾನ ಮಾಡುವುದು

ಉಪವಾಸವಿರುವವರು ಸಂಭೋಗ ಅಥವಾ ಸ್ವಪ್ನ ಸ್ಖಲನದಿಂದ ಜನಾಬತ್‌ನ ಸ್ಥಿತಿಯಲ್ಲಿದ್ದು ಪ್ರಭಾತದ ತನಕ ಸ್ನಾನ ಮಾಡದೆ, ಪ್ರಭಾತವಾದ ನಂತರ ಸ್ನಾನ ಮಾಡಿದರೆ ಅವರ ಉಪವಾಸ ಸಿಂಧುವಾಗುತ್ತದೆ. ಆದರೆ ಅವರು ಆಹಾರ, ಪಾನೀಯ ಮುಂತಾದ ಉಪವಾಸವನ್ನು ಅಸಿಂಧುಗೊಳಿಸುವ ವಸ್ತುಗಳನ್ನು ಸೇವಿಸಿರಬಾರದು ಮತ್ತು ಪ್ರಭಾತಕ್ಕೆ ಮೊದಲೇ ನಿಯ್ಯತ್ ಮಾಡಿರಬೇಕು. ಸಹೀಹುಲ್ ಬುಖಾರಿ ಮತ್ತು ಸಹೀಹ್ ಮುಸ್ಲಿಮ್‌ನಲ್ಲಿರುವ ಹದೀಸಿನಲ್ಲಿ ಆಯಿಶಾ(ﷺ) ಮತ್ತು ಉಮ್ಮು ಸಲಮಾ(ﷺ) ಹೇಳುತ್ತಾರೆ:

10 ಕುರ್‌ಆನ್ 2:286

أَنَّ رَسُولَ اللَّهِ صَلَّى اللَّهُ عَلَيْهِ وَسَلَّمَ كَانَ يُدْرِكُهُ الْفَجْرُ وَهُوَ جُنُبٌ مِنْ أَهْلِهِ، ثُمَّ يَغْتَسِلُ وَيَصُومُ.

“ತಮ್ಮ ಪತ್ನಿಯರೊಡನೆ ಸಂಭೋಗ ಮಾಡಿದ ಕಾರಣ ಪ್ರವಾದಿ(ﷺ) ಯವರಿಗೆ ಜನಾಬತ್ ಉಂಟಾದರೆ ಕೆಲವೊಮ್ಮೆ ಅವರು ಪ್ರಭಾತದ ತನಕ ಅದೇ ಸ್ಥಿತಿಯಲ್ಲಿರುತ್ತಿದ್ದರು. ನಂತರ ಸ್ನಾನ ಮಾಡಿ ಉಪವಾಸ ಮುಂದುವರಿಸುತ್ತಿದ್ದರು.”[11]

ಆಯಿಶಾ(رضي الله عنها) ಹೇಳುತ್ತಾರೆ:

كَانَ النَّبِيُّ صَلَّى اللَّهُ عَلَيْهِ وَسَلَّمَ يُدْرِكُهُ الْفَجْرُ جُنُبًا فِي رَمَضَانَ مِنْ غَيْرِ حُلُمٍ، فَيَغْتَسِلُ وَيَصُومُ.

11 ಅಲ್‌ಬುಖಾರಿ. ನೋಡಿ: ಫತ್‌ಹುಲ್ ಬಾರಿ 4/143

“ರಮದಾನ್ ತಿಂಗಳಲ್ಲಿ ಸ್ವಪ್ನ ಸ್ಖಲನವಲ್ಲದ ಬೇರೆ ಕಾರಣದಿಂದ ಪ್ರವಾದಿ(ﷺ) ಯವರಿಗೆ ಜನಾಬತ್ ಉಂಟಾದರೆ ಅವರು ಕೆಲವೊಮ್ಮೆ ಪ್ರಭಾತದ ತನಕ ಅದೇ ಸ್ಥಿತಿಯಲ್ಲಿರುತ್ತಿದ್ದರು. ನಂತರ ಸ್ನಾನ ಮಾಡಿ ಉಪವಾಸ ಮುಂದುವರಿಸುತ್ತಿದ್ದರು.”[12]

ಸಹೀಹ್ ಮುಸ್ಲಿಮ್‌ನಲ್ಲಿರುವ ವರದಿಯಲ್ಲಿ ಹೀಗಿದೆ:

يُصْبِحُ جُنُبًا مِنْ غَيْرِ حُلُمٍ ثُمَّ يَصُومُ.

“ಸ್ವಪ್ನ ಸ್ಖಲನವಲ್ಲದ ಬೇರೆ ಕಾರಣದಿಂದ ಪ್ರವಾದಿ(ﷺ) ಯವರಿಗೆ ಜನಾಬತ್ ಉಂಟಾದರೆ ಅವರು ಪ್ರಭಾತದ ತನಕ ಅದೇ ಸ್ಥಿತಿಯಲ್ಲಿರುತ್ತಿದ್ದರು. ನಂತರ (ಸ್ನಾನ ಮಾಡಿ) ಉಪವಾಸ ಮುಂದುವರಿಸುತ್ತಿದ್ದರು.”

ಇನ್ನೊಂದು ವರದಿಯಲ್ಲಿ ಹೀಗಿದೆ:

12 ಅಲ್‌ಬುಖಾರಿ. ನೋಡಿ: ಫತ್‌ಹುಲ್ ಬಾರಿ 4/153

كَانَ رَسُولُ اللَّهِ صَلَّى اللَّهُ عَلَيْهِ وَسَلَّمَ يُدْرِكُهُ الْفَجْرُ فِي رَمَضَانَ وَهُوَ جُنُبٌ مِنْ غَيْرِ حُلُمٍ فَيَغْتَسِلُ وَيَصُومُ.

“ರಮದಾನ್ ತಿಂಗಳಲ್ಲಿ ಸ್ವಪ್ನ ಸ್ಖಲನವಲ್ಲದ ಬೇರೆ ಕಾರಣದಿಂದ ಪ್ರವಾದಿ(ﷺ) ಯವರಿಗೆ ಜನಾಬತ್ ಉಂಟಾದರೆ ಅವರು ಕೆಲವೊಮ್ಮೆ ಪ್ರಭಾತದ ತನಕ ಅದೇ ಸ್ಥಿತಿಯಲ್ಲಿರುತ್ತಿದ್ದರು. ನಂತರ ಸ್ನಾನ ಮಾಡಿ ಉಪವಾಸ ಮುಂದುವರಿಸುತ್ತಿದ್ದರು.”[13]

ಹದೀಸ್‌ನಲ್ಲಿರುವ ವಿಷಯವೇ ಸರಿ. ಬಹುಸಂಖ್ಯಾತ ಉಲಮಾಗಳು ಇದೇ ಅಭಿಪ್ರಾಯವನ್ನು ಹೊಂದಿದ್ದಾ-ರೆ. ಪ್ರಭಾತದ ತನಕ ಜನಾಬತ್‌ನ ಸ್ಥಿತಿಯಲ್ಲಿದ್ದು ಪ್ರಭಾತ-ವಾದ ನಂತರ ಸ್ನಾನ ಮಾಡುವವರ ಉಪವಾಸ ಸಿಂಧು-

13 ಮುಸ್ಲಿಂ. ನೋಡಿ: ಶರ್ಹ್ ನ್ನವವೀ ಅಲಾ ಮುಸ್ಲಿಮ್ 7/221-223

ವಲ್ಲ ಎಂಬ ಅಭಿಪ್ರಾಯ ತಾಬಿಊನ್‌ಗಳಲ್ಲಿ ಕೆಲವರಿಗೆ ಇತ್ತು. ನಂತರ ಅವರು ತಮ್ಮ ಅಭಿಪ್ರಾಯದಿಂದ ಹಿಂದೆ ಸರಿದರು. ಹಾಗೆ ಹದೀಸ್‌ನಲ್ಲಿರುವ ವಿಷಯದ ಮೇಲೆ ಮುಸ್ಲಿಮರಿಗೆ ಒಮ್ಮತಾಭಿಪ್ರಾಯ ಉಂಟಾಯಿತು.[14]

ಅದೇ ರೀತಿ ಹೈದ್ (ಋತುಸ್ರಾವ) ಮತ್ತು ನಿಫಾಸ್ (ಹೆರಿಗೆ ರಕ್ತ) ಇರುವವರ ರಕ್ತವು ಪ್ರಭಾತಕ್ಕೆ ಮುಂಚೆಯೇ ನಿಂತು ಪ್ರಭಾತದ ತನಕ ಅವರು ಸ್ನಾನ ಮಾಡದಿದ್ದರೆ ಅವರ ಉಪವಾಸ ಸಿಂಧುವಾಗುತ್ತದೆ. ಹೆಚ್ಚು ಬಲ್ಲವನು ಅಲ್ಲಾಹು.

9. ಯಾತ್ರೆಯಲ್ಲಿ ಉಪವಾಸ ಆಚರಿಸುವುದು

ರಮದಾನ್ ತಿಂಗಳಲ್ಲಿ ಪ್ರಯಾಣ ಮಾಡುವವರು ತಮ್ಮ ಪ್ರಯಾಣ ಮುಗಿಯುವ ತನಕ ಉಪವಾಸ ಆಚರಿಸುವು-

14 ಫತ್‌ಹುಲ್ ಬಾರಿ 4/147; ಶರ್ಹು ನ್ನವವೀ ಅಲಾ ಮುಸ್ಲಿಮ್ 7/222

ದನ್ನು ತೊರೆಯಬಹುದು. ಆ ಉಪವಾಸಗಳನ್ನು ಅವರು ನಂತರ ಕಝಾ ನಿರ್ವಹಿಸಬೇಕು.

ಅಲ್ಲಾಹು ಹೇಳುತ್ತಾನೆ:

﴿فَمَن كَانَ مِنكُم مَّرِيضًا أَوْ عَلَىٰ سَفَرٍ فَعِدَّةٌ مِّنْ أَيَّامٍ أُخَرَ﴾

“ನಿಮ್ಮಲ್ಲಿ ಯಾರಾದರೂ ರೋಗಿಯಾಗಿದ್ದರೆ ಅಥವಾ ಯಾತ್ರೆಯಲ್ಲಿದ್ದರೆ ಅವರು ಆ ಸಂಖ್ಯೆಯನ್ನು (ಉಪವಾಸವನ್ನು) ಇತರ ದಿನಗಳಲ್ಲಿ (ಪೂರ್ತಿ ಮಾಡಬೇಕು).”[15]

ರಮದಾನ್ ತಿಂಗಳಲ್ಲಿ ಪ್ರಯಾಣ ಮಾಡುವವರಿಗೆ ಉಪವಾಸ ಆಚರಿಸುವ ಅಥವಾ ಉಪವಾಸ ತೊರೆಯುವ ಅವಕಾಶವಿದೆ. ಉಪವಾಸ ತೊರೆದವರು ಆ ಉಪವಾಸಗಳನ್ನು ನಂತರ ಕಝಾ ನಿರ್ವಹಿಸಬೇಕು.

15 ಕುರ್‌ಆನ್ 2:184

ಸಹೀಹುಲ್ ಬುಖಾರಿ ಮತ್ತು ಸಹೀಹ್ ಮುಸ್ಲಿಮ್‌ನಲ್ಲಿ-ರುವ ಹದೀಸಿನಲ್ಲಿ ಆಯಿಶಾ(﵂) ಹೇಳುತ್ತಾರೆ:

أَنَّ حَمْزَةَ بْنَ عَمْرٍو الْأَسْلَمِيَّ رَضِيَ اللَّهُ عَنْهُ قَالَ لِلنَّبِيِّ صَلَّى اللَّهُ عَلَيْهِ وَسَلَّمَ: أَأَصُــومُ فِي السَّفَرِ؟ وَكَانَ كَثِيرَ الصِّيَامِ فَقَالَ: «إِنْ شِئْتَ فَصُمْ وَإِنْ شِئْتَ فَأَفْطِرْ».

ಒಮ್ಮೆ ಹಂಝ ಇಬ್ನ್ ಅಮ್ರ್ ಅಲ್‌ಅಸ್ಲಮೀ(﵁) ಪ್ರವಾದಿ(ﷺ) ಯವರೊಂದಿಗೆ ಕೇಳಿದರು: "ನಾನು ಪ್ರಯಾಣದ ಸಂದರ್ಭ ಉಪವಾಸ ಆಚರಿಸಬೇಕೇ?" ಅವರು ಅತಿ ಹೆಚ್ಚು ಉಪವಾಸ ಆಚರಿಸುವ ವ್ಯಕ್ತಿಯಾ-ಗಿದ್ದರು. ಪ್ರವಾದಿ(ﷺ) ಯವರು ಹೇಳಿದರು: "ನಿಮಗೆ ಇಷ್ಟವಿದ್ದರೆ ಉಪವಾಸ ಆಚರಿಸಿ. ಇಲ್ಲದಿದ್ದರೆ ಬೇಡ."[16]

---

16 ಅಲ್‌ಬುಖಾರಿ. ನೋಡಿ: ಫತ್‌ಹುಲ್ ಬಾರಿ 4/179; ಮುಸ್ಲಿಂ. ನೋಡಿ: ಶರ್ಹು ನ್ನವವೀ ಅಲಾ ಮುಸ್ಲಿಮ್ 7/236-237

10. ರೋಗಿಯ ಉಪವಾಸ

ರೋಗಿಗಳಿಗೆ ರಮದಾನ್ ತಿಂಗಳಲ್ಲಿ ಉಪವಾಸವನ್ನು ತೊರೆಯಲು ಮತ್ತು ಆ ಉಪವಾಸವನ್ನು ನಂತರ ಕಝಾ ನಿರ್ವಹಿಸಲು ಅವಕಾಶವಿದೆ. ಅದೇ ರೀತಿ ಗರ್ಭಿಣಿ ಮತ್ತು ಸ್ತನಪಾನ ಮಾಡುವ ಮಹಿಳೆಯರಿಗೂ ಸಹ, ಅವರಿಗೆ ತಮ್ಮ ಆರೋಗ್ಯದ ಬಗ್ಗೆ ಅಥವಾ ತಮ್ಮ ಮಗುವಿನ ಬಗ್ಗೆ ಆತಂಕವಿದ್ದರೆ ಉಪವಾಸವನ್ನು ತೊರೆಯಲು ಮತ್ತು ಆ ಉಪವಾಸವನ್ನು ನಂತರ ಕಝಾ ನಿರ್ವಹಿಸಲು ಅವಕಾಶವಿದೆ. ಏಕೆಂದರೆ ರೋಗಿಗಳ ನಿಯಮ ಇವರಿಗೂ ಅನ್ವಯವಾಗುತ್ತದೆ.

ಅಲ್ಲಾಹು ಹೇಳುತ್ತಾನೆ:

﴿فَمَن كَانَ مِنكُم مَّرِيضًا أَوْ عَلَىٰ
سَفَرٍ فَعِدَّةٌ مِّنْ أَيَّامٍ أُخَرَ﴾

“ನಿಮ್ಮಲ್ಲಿ ಯಾರಾದರೂ ರೋಗಿಯಾಗಿದ್ದರೆ ಅಥವಾ ಯಾತ್ರೆಯಲ್ಲಿದ್ದರೆ ಅವರು ಆ ಸಂಖ್ಯೆಯನ್ನು (ಉಪವಾಸವನ್ನು) ಇತರ ದಿನಗಳಲ್ಲಿ (ಪೂರ್ತಿ ಮಾಡಬೇಕು).”[17]

“ಉಪವಾಸ ಆಚರಿಸುವುದನ್ನು ತೊರೆಯಲು ಅವಕಾಶವಿರುವ ರೋಗವು

1. ಮಾರಣಾಂತಿಕ ರೋಗ ಮತ್ತು ಉಪವಾಸ ಆಚರಿಸಲು ಅಸಾಧ್ಯವಾದಂತಹ ರೋಗವಾಗಿರಬೇಕು.
2. ಉಪವಾಸ ಆಚರಿಸಿದರೆ ಉಲ್ಬಣವಾಗುವಂತಹ ರೋಗವಾಗಿರಬೇಕು.
3. ಉಪವಾಸ ಆಚರಿಸುವುದು ಅತ್ಯಂತ ಕಷ್ಟದಾಯಕವಾಗಿರುವಂತಹ ರೋಗವಾಗಿರಬೇಕು.
4. ಉಪವಾಸ ಆಚರಿಸುವುದರಿಂದ ರೋಗ ಶಮನವು

17 ಕುರ್‌ಆನ್ 2:184

ತಡವಾಗುವಂತಹ ರೋಗವಾಗಿರಬೇಕು."[18]

ಉಪವಾಸ ಆಚರಿಸುವುದು ಕಷ್ಟವಲ್ಲದ ರೋಗವಿರುವವರು ಮತ್ತು ಉಪವಾಸವು ಆಚರಿಸಿದರೆ ರೋಗದ ಮೇಲೆ ಪ್ರತಿಕೂಲ ಪರಿಣಾಮ ಬೀರದ ರೋಗವಿರುವವರಿಗೆ ಈ ವಿನಾಯಿತಿ ಅನ್ವಯವಾಗುವುದಿಲ್ಲ. ಅವರ ಹೊರತು ಇತರೆಲ್ಲ ರೋಗಿಗಳು ಉಪವಾಸ ಆಚರಿಸುವುದನ್ನು ತೊರೆಯಬಹುದೆಂದು ವಿದ್ವಾಂಸರು ಒಮ್ಮತಾಭಿಪ್ರಾಯದಿಂದ ಹೇಳಿದ್ದಾರೆ.

ಅಲ್ಲಾಹು ಹೇಳುತ್ತಾನೆ:

﴿ وَمَا جَعَلَ عَلَيْكُمْ فِي الدِّينِ مِنْ حَرَجٍ ﴾

"ಅವನು ಧರ್ಮದಲ್ಲಿ ನಿಮಗೆ ಯಾವುದೇ ಕಷ್ಟವನ್ನೂ ಉಂಟುಮಾಡಿಲ್ಲ."[19]

---

18 ಇಬ್ನ್ ಕುದಾಮಃ ಅಲ್‌ಮುಗ್ನೀಯಲ್ಲಿ 4/403
19 ಕುರ್‌ಆನ್ 22:78

ಉಪವಾಸ ಆಚರಿಸುವುದು ಕಷ್ಟವಲ್ಲದ ರೋಗವನ್ನು ಹೊಂದಿರುವವರು ಉಪವಾಸ ಆಚರಿಸುವುದು ಕಡ್ಡಾಯವಾಗಿದೆ.

11. ಉಪವಾಸವಿರುವಾಗ ಅಶ್ಲೀಲ ಮಾತುಗಳನ್ನಾಡುವುದು

ಉಪವಾಸವಿರುವಾಗ ಅಶ್ಲೀಲ ಮಾತುಗಳನ್ನಾಡುವುದು, ಲೈಂಗಿಕ ಸರಸದಲ್ಲಿ ತೊಡಗುವುದು ಅಥವಾ ಅದರ ಕಡೆಗೆ ಸೆಳೆಯುವ ವಿಷಯಗಳನ್ನು ಮಾತನಾಡುವುದು, ಅಟ್ಟಹಾಸದಿಂದ ಮಾತನಾಡುವುದು, ಅವಿವೇಕಿಯಂತೆ ವರ್ತಿಸುವುದು, ಸುಳ್ಳು ಹೇಳುವುದು ಅಥವಾ ಅದರೊಂದಿಗೆ ಸೇರಿದ ಕೃತ್ಯಗಳನ್ನು ಮಾಡುವುದು, ನಿಂದಿಸುವುದು, ತೆಗಳುವುದು, ಜರೆಯುವುದು, ದೂಷಿಸುವುದು ಮುಂತಾದವುಗಳು ನಿಷಿದ್ಧವಾಗಿವೆ. ಉಪವಾಸವಿರುವಾಗ ಯಾರಾದರೂ ನಿಮ್ಮನ್ನು ನಿಂದಿಸಿದರೆ ಅಥವಾ ನಿಮ್ಮೊಡನೆ ಜಗಳ ಮಾಡಿದರೆ “ನನಗೆ ಉಪವಾಸ ಇದೆ”

ಎಂದು ಹೇಳಬೇಕೇ ವಿನಾ ಅವರನ್ನು ತಿರುಗಿ ನಿಂದಿ-ಸುವುದಾಗಲಿ, ಅವರೊಡನೆ ಜಗಳ ಮಾಡುವುದಾಗಲಿ ಸಲ್ಲದು. ಕಾರಣ, ಸಹೀಹುಲ್ ಬುಖಾರಿ ಮತ್ತು ಸಹೀಹ್ ಮುಸ್ಲಿಮ್‌ನಲ್ಲಿರುವ ಅಬೂ ಹುರೈರ(﵁) ರವರ ಹದೀ-ಸಿನಲ್ಲಿ ಪ್ರವಾದಿ(ﷺ) ಯವರು ಹೇಳುತ್ತಾರೆ:

«الصِّيَامُ جُنَّةٌ، وَإِذَا كَانَ يَوْمُ صَوْمِ أَحَدِكُمْ فَلَا يَرْفُثْ وَلَا يَصْخَبْ. فَإِنْ سَابَّهُ أَحَدٌ أَوْ قَاتَلَهُ فَلْيَقُلْ إِنِّي امْرُؤٌ صَائِمٌ».

“ಉಪವಾಸ ಒಂದು ಗುರಾಣಿಯಾಗಿದೆ. ನೀವು ಉಪ-ವಾಸದಲ್ಲಿರುವಾಗ ಅಶ್ಲೀಲ ಮಾತುಗಳನ್ನಾಡುವುದೋ ಅಟ್ಟಹಾಸದಿಂದ ಮಾತನಾಡುವುದೋ ಸಲ್ಲದು. (ಉಪ-ವಾಸದ ಸಮಯದಲ್ಲಿ) ನಿಮ್ಮನ್ನು ಯಾರಾದರೂ ನಿಂದಿ-ಸಿದರೆ ಅಥವಾ ಜಗಳ ಮಾಡಿದರೆ ನನಗೆ ಉಪವಾಸವಿದೆ

ಎಂದು ಹೇಳಿಬಿಡಿ."[20]

ಇನ್ನೊಂದು ವರದಿಯಲ್ಲಿ ಹೀಗಿದೆ:

«الصِّيَامُ جُنَّةٌ. فَلَا يَرْفُثْ وَلَا يَجْهَلْ. وَإِنِ امْرُؤٌ قَاتَلَهُ أَوْ شَاتَمَهُ فَلْيَقُلْ إِنِّي صَائِمٌ مَرَّتَيْنِ».

"ಉಪವಾಸ ಒಂದು ಗುರಾಣಿಯಾಗಿದೆ. ಆದ್ದರಿಂದ (ಉಪವಾಸವಿರುವವನು) ಅಶ್ಲೀಲ ಮಾತುಗಳನ್ನಾಡು-ವುದೋ, ಅವಿವೇಕಿಯಂತೆ ವರ್ತಿಸುವುದೋ ಸಲ್ಲದು. ಯಾರಾದರೂ ಜಗಳ ಮಾಡಿದರೆ ಅಥವಾ ನಿಂದಿಸಿದರೆ ನನಗೆ ಉಪವಾಸವಿದೆ ಎಂದು ಎರಡು ಸಲ ಹೇಳಿಬಿಡಿ."[21]

ಮುಸ್ಲಿಮ್‌ರ ವರದಿಯಲ್ಲಿ ಹೀಗಿದೆ:

---

20 ಅಲ್‌ಬುಖಾರಿ. ನೋಡಿ: ಫತ್‌ಹುಲ್ ಬಾರಿ 4/118
21 ಅಲ್‌ಬುಖಾರಿ. ನೋಡಿ: ಫತ್‌ಹುಲ್ ಬಾರಿ 4/103

«إِذَا أَصْبَحَ أَحَدُكُمْ يَوْمًا صَائِمًا، فَلَا يَرْفُثْ وَلَا يَجْهَلْ. فَإِنِ امْرُؤٌ شَاتَمَهُ أَوْ قَاتَلَهُ فَلْيَقُلْ إِنِّي صَائِمٌ إِنِّي صَائِمٌ».

"ನೀವು ಉಪವಾಸದಲ್ಲಿರುವಾಗ ಅಶ್ಲೀಲ ಮಾತುಗಳನ್ನಾಡುವುದೋ, ಅವಿವೇಕಿಯಂತೆ ವರ್ತಿಸುವುದೋ ಸಲ್ಲದು. ನಿಮ್ಮನ್ನು ಯಾರಾದರೂ ನಿಂದಿಸಿದರೆ ಅಥವಾ ಜಗಳ ಮಾಡಿದರೆ ನನಗೆ ಉಪವಾಸವಿದೆ, ನನಗೆ ಉಪವಾಸವಿದೆ ಎಂದು ಹೇಳಿಬಿಡಿ."[22]

ಮುಸ್ಲಿಮ್‌ರ ಇನ್ನೊಂದು ವರದಿಯಲ್ಲಿ ಹೀಗಿದೆ:

«وَالصِّيَامُ جُنَّةٌ. فَإِذَا كَانَ يَوْمُ صَوْمِ أَحَدِكُمْ فَلَا يَرْفُثْ يَوْمَئِذٍ وَلَا يَصْخَبْ. فَإِنْ سَابَّهُ أَحَدٌ أَوْ قَاتَلَهُ فَلْيَقُلْ إِنِّي امْرُؤٌ صَائِمٌ».

22 ಮುಸ್ಲಿಂ. ನೋಡಿ: ಶರ್ಹು ನ್ನವವೀ ಅಲಾ ಮುಸ್ಲಿಮ್ 8/28

“ಉಪವಾಸ ಒಂದು ಗುರಾಣಿಯಾಗಿದೆ. ನೀವು ಉಪವಾಸವಿರುವಾಗ ಅಶ್ಲೀಲ ಮಾತುಗಳನ್ನಾಡುವುದೋ, ಅಟ್ಟಹಾಸದಿಂದ ಮಾತನಾಡುವುದೋ ಸಲ್ಲದು. ನಿಮ್ಮನ್ನು ಯಾರಾದರೂ ನಿಂದಿಸಿದರೆ ಅಥವಾ ಜಗಳ ಮಾಡಿದರೆ ನನಗೆ ಉಪವಾಸವಿದೆ ಎಂದು ಹೇಳಿಬಿಡಿ.”[23]

ಅಬೂ ಹುರೈರ(ﷺ) ರಿಂದ ಸಹೀಹಾಗಿ ವರದಿಯಾದ ಇನ್ನೊಂದು ಹದೀಸಿನಲ್ಲಿ ಪ್ರವಾದಿ(ﷺ) ಯವರು ಹೇಳುತ್ತಾರೆ:

«مَنْ لَمْ يَدَعْ قَوْلَ الزُّورِ وَالْعَمَلَ بِهِ فَلَيْسَ لِلَّهِ حَاجَةٌ فِي أَنْ يَدَعَ طَعَامَهُ وَشَرَابَهُ»

“ಯಾರು ಸುಳ್ಳು ಹೇಳುವುದನ್ನು ಮತ್ತು ಅದರೊಂದಿಗೆ ಸೇರಿದ ಕೃತ್ಯಗಳನ್ನು ತೊರೆಯುವುದಿಲ್ಲವೋ ಅವರು

23 ಮುಸ್ಲಿಂ. ನೋಡಿ: ಶರ್ಹು ನ್ನವವೀ ಅಲಾ ಮುಸ್ಲಿಮ್ 8/31

ತಮ್ಮ ಆಹಾರ–ಪಾನೀಯಗಳನ್ನು ತೊರೆಯಬೇಕೆಂಬ ಯಾವುದೇ ಬಯಕೆ ಅಲ್ಲಾಹನಿಗಿಲ್ಲ."[24]

ಅಲ್‌ಬುಖಾರಿ(ﷺ) ತಮ್ಮ 'ಕಿತಾಬುಲ್ ಅದಬ್'ನಲ್ಲಿ ಉದ್ಧರಿಸಿದ ಹದೀಸಿನಲ್ಲಿ ಹೀಗಿದೆ:

«مَنْ لَمْ يَدَعْ قَوْلَ الزُّورِ وَالْعَمَلَ بِهِ وَالْجَهْلَ فَلَيْسَ لِلَّهِ حَاجَةٌ فِي أَنْ يَدَعَ طَعَامَهُ وَشَرَابَهُ»

"ಯಾರು ಸುಳ್ಳು ಹೇಳುವುದನ್ನು, ಅದರೊಂದಿಗೆ ಸೇರಿದ ಕೃತ್ಯಗಳನ್ನು ಮತ್ತು ಅವಿವೇಕಿಯಾಗಿ ವರ್ತಿಸುವುದನ್ನು ತೊರೆಯುವುದಿಲ್ಲವೋ ಅವರು ತಮ್ಮ ಆಹಾರ–ಪಾನೀಯಗಳನ್ನು ತೊರೆಯಬೇಕೆಂಬ ಯಾವುದೇ ಬಯಕೆ ಅಲ್ಲಾಹನಿಗಿಲ್ಲ."[25]

---

24 ಅಲ್‌ಬುಖಾರಿ. ನೋಡಿ: ಫತ್‌ಹುಲ್ ಬಾರಿ 4/116
25 ಅಲ್‌ಬುಖಾರಿ. ನೋಡಿ: ಫತ್‌ಹುಲ್ ಬಾರಿ 10/473

12. ಇಫ್ತಾರ್ ಮಾಡಲು ಆತುರಪಡುವುದು

ಸೂರ್ಯಾಸ್ತವನ್ನು ಸ್ವತಃ ವೀಕ್ಷಿಸುವ ಮೂಲಕ ಅಥವಾ ಸೂರ್ಯಾಸ್ತವಾಯಿತೆಂದು ವಿಶ್ವಾಸಯೋಗ್ಯ ಜನರು ಹೇಳಿದರೆ ಇಫ್ತಾರ್ ಮಾಡಲು ಆತುರಪಡಬೇಕು. ಇದು ಪ್ರೋತ್ಸಾಹನೀಯವಾಗಿದೆ. ಕಾರಣ, ಸಹೀಹುಲ್ ಬುಖಾರಿ ಮತ್ತು ಸಹೀಹ್ ಮುಸ್ಲಿಮ್‌ನಲ್ಲಿರುವ ಸಹ್ಲ್ ಇಬ್ನ್ ಸಅ್ದ್(ﷺ) ರವರ ಹದೀಸಿನಲ್ಲಿ ಪ್ರವಾದಿ(ﷺ) ಯವರು ಹೇಳುತ್ತಾರೆ:

«لَا يَزَالُ النَّاسُ بِخَيْرٍ مَا عَجَّلُوا الْفِطْرَ».

“ಇಫ್ತಾರ್ ಮಾಡಲು ಆತುರಪಡುವ ತನಕ ಜನರು ಒಳಿತಿನಲ್ಲೇ ಇರುತ್ತಾರೆ.”[26]

ಇಫ್ತಾರ್ ಮಾಡಲು ಆತುರಪಡುವುದು ಎಂದರೆ ಅಲ್ಲಾ-

26 ಅಲ್‌ಬುಖಾರಿ. ನೋಡಿ: ಫತ್‌ಹುಲ್ ಬಾರಿ 4/198; ಮುಸ್ಲಿಂ. ನೋಡಿ: ಶರ್ಹು ನ್ನವವೀ ಅಲಾ ಮುಸ್ಲಿಮ್ 7/208

ಹನ ಆಜ್ಞಾಪಾಲನೆ ಮಾಡಲು ಆತುರಪಡುವುದಾಗಿದೆ. ಇಫ್ತಾರ್ ಮಾಡಲು ತಡ ಮಾಡುವುದು —ಇಂದಿನ ಕೆಲವು ಪಥಭ್ರಷ್ಟ ಪಂಗಡಗಳು ಮಾಡುವಂತೆ ನಕ್ಷತ್ರಗಳು ಗೋಚರವಾಗುವ ತನಕ ಇಫ್ತಾರನ್ನು ಮುಂದೂಡುವುದು— ಯಹೂದ–ಕ್ರೈಸ್ತರಂತೆ ಧರ್ಮದಲ್ಲಿ ಹದ್ದು ಮೀರುವುದಾಗಿದೆ. ಅಬೂದಾವೂದ್, ಇಬ್ನ್ ಖುಝೈಮ ಮುಂತಾದವರು ವರದಿ ಮಾಡಿದ ಹದೀಸಿನಲ್ಲಿ ಹೀಗಿದೆ:

«لِأَنَّ الْيَهُودَ وَالنَّصَارَى يُؤَخِّرُونَ».

"ಏಕೆಂದರೆ ಯಹೂದ–ಕ್ರೈಸ್ತರು ಇಫ್ತಾರನ್ನು ತಡಮಾಡುತ್ತಾರೆ."[27]

ಇಬ್ನ್ ಹಿಬ್ಬಾನ್ ಮತ್ತು ಅಲ್‌ಹಾಕಿಮ್‌ನಲ್ಲಿರುವ ವರದಿ ಹೀಗಿದೆ:

27 ಫತ್‌ಹುಲ್ ಬಾರಿ 4/199

«لَا تَزَالُ أُمَّتِي عَلَى سُنَّتِي مَا لَمْ تَنْتَظِرْ بِفِطْرِهَا النُّجُومَ».

"ಇಫ್ತಾರ್ ಮಾಡಲು ನಕ್ಷತ್ರಗಳು ಪ್ರತ್ಯಕ್ಷವಾಗುವುದನ್ನು ಕಾಯದಿರುವ ತನಕ ನನ್ನ ಸಮುದಾಯವು ನನ್ನ ಸುನ್ನ-ತ್ತಿನಲ್ಲೇ ಇರುತ್ತದೆ."[28]

ಇಫ್ತಾರ್ ಮಾಡಲು ಆತುರ ಪಡುವುದು ಪ್ರೋತ್ಸಾಹ-ನೀಯ ಎನ್ನುವುದನ್ನು ಸೂಚಿಸುವ ಇನ್ನೊಂದು ಹದೀಸ್ ಸಹೀಹುಲ್ ಬುಖಾರಿ ಮತ್ತು ಸಹೀಹ್ ಮುಸ್ಲಿಮ್‌ನಲ್ಲಿ-ದೆ. ಉಮರ್ ಇಬ್ನುಲ್ ಖತ್ತಾಬ್(ﷺ) ರವರು ವರದಿ ಮಾಡಿದ ಆ ಹದೀಸಿನಲ್ಲಿ ಪ್ರವಾದಿ(ﷺ) ಯವರು ಹೇ-ಳುತ್ತಾರೆ:

«إِذَا أَقْبَلَ اللَّيْلُ مِنْ هَهُنَا، وَأَدْبَـرَ النَّهَارُ

28 ಫತ್‌ಹುಲ್ ಬಾರಿ 4/199

مِنْ هَهُنَا، وَغَرَبَتِ الشَّمْسُ، فَقَدْ أَفْطَرَ الصَّائِمُ».

“ರಾತ್ರಿ ಆ ಕಡೆಯಿಂದ (ಪೂರ್ವದಿಂದ) ಬಂದು, ಹಗಲು ಈ ಕಡೆಯಿಂದ (ಪಶ್ಚಿಮದಿಂದ) ಹೊರಟುಹೋಗಿ ಸೂರ್ಯಾಸ್ತವಾದರೆ ಉಪವಾಸವಿರುವವರು ಇಫ್ತಾರ್ ಮಾಡುವ ಸಮಯವಾಯಿತು.”[29]

13. ಸಹರಿಯನ್ನು ತಡಮಾಡುವುದು

ಸಹರಿ ಉಣ್ಣುವುದು ಪ್ರೋತ್ಸಾಹನೀಯವಾಗಿದ್ದು ಅದನ್ನು ತಡಮಾಡುವುದು ಪ್ರೋತ್ಸಾಹನೀಯವಾಗಿ- ದೆ. ಅಲ್ಲಾಹು ತಆಲಾ ಹೇಳುತ್ತಾನೆ:

﴿وَكُلُوا۟ وَٱشْرَبُوا۟ حَتَّىٰ يَتَبَيَّنَ لَكُمُ ٱلْخَيْطُ

29 ಅಲ್‌ಬುಖಾರಿ. ನೋಡಿ: ಫತ್‌ಹುಲ್ ಬಾರಿ 4/196; ಮುಸ್ಲಿಂ. ನೋಡಿ: ಶರ್ಹು ನ್ನವವೀ ಅಲಾ ಮುಸ್ಲಿಮ್ 7/209

﴿ٱلْأَبْيَضُ مِنَ ٱلْخَيْطِ ٱلْأَسْوَدِ مِنَ ٱلْفَجْرِ﴾

"ಪ್ರಭಾತದ ಬಿಳಿ ನೂಲು ಮತ್ತು ಕಪ್ಪು ನೂಲು ಸ್ಪಷ್ಟವಾಗಿ ತಿಳಿಯುವ ತನಕ ತಿನ್ನಿರಿ ಮತ್ತು ಕುಡಿಯಿರಿ."[30]

ಸಹೀಹುಲ್ ಬುಖಾರಿ ಮತ್ತು ಸಹೀಹ್ ಮುಸ್ಲಿಮ್‌ನಲ್ಲಿರುವ ಇಬ್ನ್ ಉಮರ್(ﷺ) ರವರ ಹದೀಸಿನಲ್ಲಿ ಹೀಗಿದೆ: ಪ್ರವಾದಿ(ﷺ) ಯವರಿಗೆ ಬಿಲಾಲ್ ಮತ್ತು ಕುರುಡರಾದ ಇಬ್ನ್ ಉಮ್ಮಿ ಮಕ್ತೂಮ್ ಎಂಬ ಇಬ್ಬರು ಮುಅಝ್ಝಿನ್‌ಗಳಿದ್ದರು. ಪ್ರವಾದಿ(ﷺ) ಯವರು ಹೇಳುತ್ತಿದ್ದರು:

«إِنَّ بِلَالًا يُؤَذِّنُ بِلَيْلٍ، فَكُلُوا وَاشْرَبُوا حَتَّى يُؤَذِّنَ ابْنُ أُمِّ مَكْتُومٍ».

"ಬಿಲಾಲ್ ಇನ್ನೂ ಕತ್ತಲಿರುವಾಗಲೇ ಅಝಾನ್ ನೀಡುತ್ತಾರೆ. ಆದ್ದರಿಂದ ಇಬ್ನ್ ಉಮ್ಮಿ ಮಕ್ತೂಮ್ ಅಝಾನ್

30 ಕುರ್‌ಆನ್ 2:187

ನೀಡುವ ತನಕ ನೀವು ತಿನ್ನಿರಿ ಮತ್ತು ಕುಡಿಯಿರಿ."

ಇದರ ವರದಿಗಾರರಲ್ಲಿ ಒಬ್ಬರಾದ ಕಾಸಿಮ್ ಇಬ್ನ್ ಮುಹಮ್ಮದ್(ರ) ಹೇಳುತ್ತಾರೆ: ಇವರಿಬ್ಬರ ಅಝಾನ್‌ಗಳ ನಡುವೆಯಿದ್ದ ಅಂತರವು ಒಬ್ಬರು ಕೆಳಗಿಳಿಯುವುದು ಮತ್ತು ಇನ್ನೊಬ್ಬರು ಮೇಲೆ ಹತ್ತುವುದಾಗಿದೆ.[31]

ಸಹರಿ ಉಣ್ಣುವುದು ಪ್ರೋತ್ಸಾಹನೀಯ ಮತ್ತು ಅದನ್ನು ತಡಮಾಡುವುದು ಕೂಡ ಪ್ರೋತ್ಸಾಹನೀಯ ಎನ್ನುವುದಕ್ಕೆ ಸಹೀಹುಲ್ ಬುಖಾರಿ ಮತ್ತು ಸಹೀಹ್ ಮುಸ್ಲಿಮ್‌ನಲ್ಲಿರುವ ಅನಸ್(﵁) ರವರ ಹದೀಸ್ ಪುರಾವೆಯಾಗಿದೆ. ಆ ಹದೀಸಿನಲ್ಲಿ ಪ್ರವಾದಿ(ﷺ) ಯವರು ಹೇಳುತ್ತಾರೆ:

«تَسَحَّرُوا فَإِنَّ فِي السَّحُورِ بَرَكَةٌ».

"ನೀವು ಸಹರಿ ಉಣ್ಣಿರಿ. ಖಂಡಿತವಾಗಿಯೂ ಸಹರಿಯಲ್ಲಿ

31 ಅಲ್‌ಬುಖಾರಿ. ನೋಡಿ: ಫತ್‌ಹುಲ್ ಬಾರಿ 4/136; ಮುಸ್ಲಿಂ. ನೋಡಿ: ಶರ್ಹು ನ್ನವವೀ ಅಲಾ ಮುಸ್ಲಿಮ್ 7/203

ಬರಕತ್ ಇದೆ."[32]

ಸಹೀಹ್ ಮುಸ್ಲಿಮ್‌ನಲ್ಲಿ ವರದಿಯಾಗಿರುವ ಅಮ್ರ್ ಇಬ್ನುಲ್ ಆಸ್(﵁) ರವರ ಹದೀಸಿನಲ್ಲಿ ಪ್ರವಾದಿ(ﷺ) ಯವರು ಹೇಳುತ್ತಾರೆ:

«فَصْلُ مَا بَيْنَ صِيَامِنَا وَصِيَامِ أَهْلِ الْكِتَابِ أَكْلَةُ السَّحَرِ»

"ಸಹರಿ ಉಣ್ಣುವುದು ನಮ್ಮ ಮತ್ತು ಅಹ್ಲುಲ್ ಕಿತಾಬ್‌ಗಳ ಉಪವಾಸದ ಮಧ್ಯೆ ಇರುವ ವ್ಯತ್ಯಾಸವಾಗಿದೆ."[33]

14. ಉಪವಾಸವಿರುವಾಗ ಪತ್ನಿಯನ್ನು ಚುಂಬಿಸುವುದು

ಪತ್ನಿಯನ್ನು ಚುಂಬಿಸಬಹುದು ಅಥವಾ ತಬ್ಬಿಕೊಳ್ಳ-

32 ಅಲ್‌ಬುಖಾರಿ. ನೋಡಿ: ಫತ್‌ಹುಲ್ ಬಾರಿ 4/139; ಮುಸ್ಲಿಂ. ನೋಡಿ: ಶರ್ಹು ನ್ನವವೀ ಅಲಾ ಮುಸ್ಲಿಮ್ 7/306-307

33 ಮುಸ್ಲಿಂ. ನೋಡಿ: ಶರ್ಹು ನ್ನವವೀ ಅಲಾ ಮುಸ್ಲಿಮ್ 7/307

ಬಹುದು. ಆದರೆ ಹಾಗೆ ಮಾಡುವುದರಿಂದ ಕಾಮೋ-ದ್ರೇಕವಾಗುವ ಅಥವಾ ಸ್ಖಲನವಾಗುವ ಆತಂಕವಿದ್ದ-ರೆ ಅದನ್ನು ಬಿಟ್ಟುಬಿಡಬೇಕು. ಕಾರಣ, ಸಹೀಹುಲ್ ಬುಖಾರಿ ಮತ್ತು ಸಹೀಹ್ ಮುಸ್ಲಿಮ್‌ನಲ್ಲಿರುವ ಹದೀ-ಸಿನಲ್ಲಿ ಆಯಿಶಾ(ﷺ) ರವರು ಹೇಳುತ್ತಾರೆ:

كَانَ النَّبِيُّ صَلَّى اللَّهُ عَلَيْهِ وَسَلَّمَ يُقَبِّلُ وَهُوَ صَائِمٌ، وَيُبَاشِرُ وَهُوَ صَائِمٌ. وَلَكِنَّهُ أَمْلَكُكُمْ لِإِرْبِهِ.

"ಪ್ರವಾದಿ(ﷺ) ಯವರು ಉಪವಾಸವಿರುವಾಗ ಚುಂ-ಬಿಸುತ್ತಿದ್ದರು ಮತ್ತು ಉಪವಾಸವಿರುವಾಗ ತಬ್ಬಿಕೊಳ್ಳು-ತ್ತಿದ್ದರು. ಆದರೆ ಅವರಿಗೆ ನಿಮಗಿಂತಲೂ ಹೆಚ್ಚು ಆತ್ಮ-ನಿಗ್ರಹವಿತ್ತು."[34]

---

34 ಅಲ್‌ಬುಖಾರಿ. ನೋಡಿ: ಫತ್‌ಹುಲ್ ಬಾರಿ 4/149; ಮುಸ್ಲಿಂ. ನೋಡಿ: ಶರ್ಹು ನ್ನವವೀ ಅಲಾ ಮುಸ್ಲಿಮ್ 7/217

ಸಹೀಹುಲ್ ಬುಖಾರಿ ಮತ್ತು ಸಹೀಹ್ ಮುಸ್ಲಿಮ್‌ನಲ್ಲಿ ವರದಿಯಾಗಿರುವ ಇನ್ನೊಂದು ಹದೀಸಿನಲ್ಲಿ ಆಯಿಶಾ (﵂) ರವರು ಹೇಳುತ್ತಾರೆ:

إِنْ كَانَ رَسُولُ اللَّهِ صَلَّى اللَّهُ عَلَيْهِ وَسَلَّمَ لَيُقَبِّلُ بَعْضَ أَزْوَاجِهِ وَهُوَ صَائِمٌ.

“ಪ್ರವಾದಿ(ﷺ) ಯವರು ಉಪವಾಸವಿರುವಾಗ ಅವರ ಮಡದಿಯರನ್ನು ಚುಂಬಿಸುತ್ತಿದ್ದರು.” ಇದನ್ನು ಹೇಳಿ ಆಯಿಶಾ(﵂) ಮುಗುಳ್ನಕ್ಕರು.[35]

ಸಹೀಹ್ ಮುಸ್ಲಿಮ್‌ನಲ್ಲಿ ವರದಿಯಾಗಿರುವ ಹದೀಸಿನಲ್ಲಿ ಪ್ರವಾದಿಪತ್ನಿ ಹಫ್ಸಾ(﵂) ಹೇಳುತ್ತಾರೆ:

كَانَ رَسُولُ اللَّهِ صَلَّى اللَّهُ عَلَيْهِ وَسَلَّمَ يُقَبِّلُ

35 ಅಲ್‌ಬುಖಾರಿ. ನೋಡಿ: ಫತ್‌ಹುಲ್ ಬಾರಿ 4/156; ಮುಸ್ಲಿಂ. ನೋಡಿ: ಶರ್ಹ್ ನ್ನವವೀ ಅಲಾ ಮುಸ್ಲಿಮ್ 7/215

وَهُوَ صَائِمٌ.

“ಪ್ರವಾದಿ(ﷺ) ಯವರು ಉಪವಾಸವಿರುವಾಗ ಚುಂಬಿಸುತ್ತಿದ್ದರು.”[36]

ಸಹೀಹ್ ಮುಸ್ಲಿಮ್‌ನಲ್ಲಿ ವರದಿಯಾಗಿರುವ ಇನ್ನೊಂದು ಹದೀಸಿನಲ್ಲಿ ಆಯಿಶಾ(رضي الله عنها) ಹೇಳುತ್ತಾರೆ:

كَانَ رَسُولُ اللَّهِ صَلَّى اللَّهُ عَلَيْهِ وَسَلَّمَ يُقَبِّلُ فِي شَهَرِ الصَّوْمِ.

“ಪ್ರವಾದಿ(ﷺ) ಯವರು ಉಪವಾಸದ ತಿಂಗಳಲ್ಲಿ (ರಮದಾನ್ ತಿಂಗಳಲ್ಲಿ) ಚುಂಬಿಸುತ್ತಿದ್ದರು.”[37]

ಸಹೀಹುಲ್ ಬುಖಾರಿಯಲ್ಲಿ ವರದಿಯಾಗಿರುವ ಒಂದು ಹದೀಸಿನಲ್ಲಿ ಪ್ರವಾದಿಪತ್ನಿ ಉಮ್ಮು ಸಲಮ(رضي الله عنها) ಹೇ-

---

36 ಮುಸ್ಲಿಂ. ನೋಡಿ: ಶರ್ಹು ನ್ನವವೀ ಅಲಾ ಮುಸ್ಲಿಮ್ 7/219
37 ಮುಸ್ಲಿಂ. ನೋಡಿ: ಶರ್ಹು ನ್ನವವೀ ಅಲಾ ಮುಸ್ಲಿಮ್ 7/218

ಉತ್ತಾರೆ:

أَنَّ النَّبِيَّ صَلَّى اللَّهُ عَلَيْهِ وَسَلَّمَ كَانَ يُقَبِّلُهَا وَهُوَ صَائِمٌ.

"ಪ್ರವಾದಿ(ﷺ) ಯವರು ಉಪವಾಸವಿರುವಾಗ ನನ್ನನ್ನು ಚುಂಬಿಸುತ್ತಿದ್ದರು."[38]

ಪತ್ನಿಯನ್ನು ಚುಂಬಿಸಿದರೆ ಅಥವಾ ತಬ್ಬಿಕೊಂಡರೆ ಸ್ಖ-ಲನವಾಗಬಹುದೆಂಬ ಆತಂಕವಿರುವವರಂತೆ ಮಝೀ (ಬಿಳಿಸ್ರಾವ) ಅಥವಾ ಮನೀ (ವೀರ್ಯ) ಸ್ಖಲನವಾಗ-ಬಹುದೆಂಬ ಆತಂಕವಿರುವವರು ಕೂಡ ಪತ್ನಿಯನ್ನು ಚುಂಬಿಸಬಾರದು ಮತ್ತು ತಬ್ಬಿಕೊಳ್ಳಬಾರದು. ಪತ್ನಿಯ-ನ್ನು ಚುಂಬಿಸಿದರೆ ಅಥವಾ ತಬ್ಬಿಕೊಂಡರೆ ಉಪವಾಸ ಅಸಿಂಧುವಾಗುವುದಿಲ್ಲ. ಆದರೆ ಹೀಗೆ ಮಾಡಿದರೆ ಸ್ಖ-

38 ಫತ್‌ಹುಲ್ ಬಾರಿ 4/152

ಲನವಾಗಬಹುದೆಂಬ ಆತಂಕವಿರುವವರು ಚುಂಬನ ಮತ್ತು ತಬ್ಬಿಕೊಳ್ಳುವುದನ್ನು ತೊರೆಯುವುದು ಕಡ್ಡಾಯವಾಗಿದೆ. ಕಾರಣ, ಆಯಿಶಾ(رضي الله عنها) ಹೇಳಿದಂತೆ ಪ್ರವಾದಿ (ﷺ) ಯವರಿಗೆ ಆತ್ಮನಿಗ್ರಹ ಇದೆ. ಆದ್ದರಿಂದಲೇ ಅವರು ಮಡದಿಯರನ್ನು ಚುಂಬಿಸುತ್ತಿದ್ದರು ಮತ್ತು ತಬ್ಬಿಕೊಳ್ಳುತ್ತಿದ್ದರು. ಉಪವಾಸವನ್ನು ಅಸಿಂಧುವಾಗದಂತೆ ಕಾಪಾಡುವುದು ಕಡ್ಡಾಯವಾಗಿದೆ. ಕಡ್ಡಾಯವನ್ನು ನೆರವೇರಿಸಲು ಯಾವುದು ಅನಿವಾರ್ಯವೋ ಅದು ಕೂಡ ಕಡ್ಡಾಯವಾಗುತ್ತದೆ.

ಪತ್ನಿಯನ್ನು ಚುಂಬಿಸಿದಾಗ ಅಥವಾ ತಬ್ಬಿಕೊಂಡಾಗ ಸ್ಖಲನವಾದರೆ ಉಪವಾಸ ಅಸಿಂಧುವಾಗುತ್ತದೆ. ಒಬ್ಬ ಮಹಿಳೆಯನ್ನು ಪದೇ ಪದೇ ನೋಡಿ ಸ್ಖಲನವಾದರೂ ಉಪವಾಸ ಅಸಿಂಧುವಾಗುತ್ತದೆ. ಹಸ್ತಮೈಥುನ ಮಾಡಿ ಸ್ಖಲನವಾದರೂ ಉಪವಾಸ ಅಸಿಂಧುವಾಗುತ್ತದೆ. ಈ ಮೇಲಿನ ಕಾರಣಗಳಿಂದ ಅಸಿಂಧುವಾದ ಉಪವಾಸ-

ಗಳನ್ನು ಕರ್ಝಾ ನಿರ್ವಹಿಸಬೇಕು. ಆದರೆ ಅದಕ್ಕೆ ಪ್ರಾಯಶ್ಚಿತ್ತ ನೀಡಬೇಕಾಗಿಲ್ಲ. ಪ್ರಾಯಶ್ಚಿತ್ತವಿರುವುದು ಸಂಭೋಗಕ್ಕೆ ಮಾತ್ರ.

ಆದರೆ ಮನಸ್ಸಿನಲ್ಲಿ ಕೆಟ್ಟ ಯೋಚನೆ ಮೂಡಿ ಸ್ಖಲನವಾದರೆ, ಅಥವಾ ಒಬ್ಬ ಮಹಿಳೆಯನ್ನು ಆಕಸ್ಮಾತ್ ನೋಡಿದಾಗ ಪ್ರಥಮ ನೋಟದಲ್ಲೇ ಸ್ಖಲನವಾದರೆ ಉಪವಾಸ ಅಸಿಂಧುವಾಗುವುದಿಲ್ಲ. ಕಾರಣ, ಅದು ಉದ್ದೇಶಪೂರ್ವಕ ಸಂಭವಿಸಿದ್ದಲ್ಲ. ಆದರೆ ತಬ್ಬಿಕೊಳ್ಳುವುದು, ಚುಂಬಿಸುವುದು, ಪದೇ ಪದೇ ನೋಡುವುದು ಮುಂತಾದವುಗಳು ಉದ್ದೇಶಪೂರ್ವಕ ಸಂಭವಿಸುವ ಕಾರ್ಯಗಳಾದ ಕಾರಣ ಉಪವಾಸ ಅಸಿಂಧುವಾಗುತ್ತದೆ. ಆದರೆ ಮನಸ್ಸಿನಲ್ಲಿ ಮೂಡುವ ಭಾವನೆ, ಆಕಸ್ಮಾತ್ ನೋಟ ಮುಂತಾದವುಗಳು ಉದ್ದೇಶಪೂರ್ವಕವಲ್ಲದೆ ಸಂಭವಿಸುವ ಕಾರ್ಯಗಳಾದ ಕಾರಣ ಉಪವಾಸವು ಅಸಿಂಧುವಾಗುವುದಿಲ್ಲ.

15. ಉಪವಾಸವಿರುವಾಗ ಸ್ನಾನ ಮಾಡುವುದು ಮತ್ತು ಬಾಯಿ ಮುಕ್ಕಳಿಸುವುದು

ಉಪವಾಸವಿರುವಾಗ ಸ್ನಾನ ಮಾಡಿದರೆ ಉಪವಾಸ ಅಸಿಂಧುವಾಗುವುದಿಲ್ಲ. ಬಾಯಿ ಮುಕ್ಕಳಿಸುವಾಗ ಅಥವಾ ಮೂಗಿಗೆ ನೀರೆಳೆದು ಹೊರಬಿಡುವಾಗ ಆಕಸ್ಮಾತ್ ಸ್ವಲ್ಪ ನೀರು ಗಂಟಲಿನೊಳಗೆ ಹೋದರೆ ಉಪವಾಸ ಅಸಿಂಧುವಾಗುವುದಿಲ್ಲ. ಅದೇ ರೀತಿ ಗಂಟಲಿನೊಳಗೆ ಆಕಸ್ಮಾತ್ ನೊಣ ಮುಂತಾದ ಕೀಟಗಳು ಹೊಕ್ಕರೆ ಉಪವಾಸ ಅಸಿಂಧುವಾಗುವುದಿಲ್ಲ. ಗಂಟಲಿನೊಳಗೆ ಧೂಳು ಹೊಕ್ಕುವುದನ್ನು ತಡೆಗಟ್ಟಲು ಸಾಧ್ಯವಾಗದಿದ್ದರೆ ಉಪವಾಸ ಅಸಿಂಧುವಾಗುವುದಿಲ್ಲ. ಕಾರಣ, ಇವೆಲ್ಲವೂ ಉದ್ದೇಶಪೂರ್ವಕ ಸಂಭವಿಸುವ ಕಾರ್ಯಗಳಲ್ಲ. ಅಲ್ಲಾಹು ಹೇಳುತ್ತಾನೆ:

﴿لَا يُكَلِّفُ ٱللَّهُ نَفْسًا إِلَّا وُسْعَهَا﴾

"ಒಬ್ಬ ವ್ಯಕ್ತಿಯ ಮೇಲೆ ಅವನ ಸಾಮರ್ಥ್ಯಕ್ಕಿಂತಲೂ ಹೆಚ್ಚಿನದ್ದನ್ನು ಅಲ್ಲಾಹು ಕಡ್ಡಾಯಗೊಳಿಸುವುದಿಲ್ಲ."[39]

16. ಪ್ರಭಾತವಾಗಿದೆಯೋ ಇಲ್ಲವೋ ಎಂಬ ಸಂಶಯದಿಂದ ಆಹಾರ–ಪಾನೀಯ ಸೇವಿಸುವುದು

ಪ್ರಭಾತವಾಗಿದೆಯೋ ಇಲ್ಲವೋ ಎಂಬ ಸಂಶಯದಿಂದ ಅಥವಾ ಪ್ರಭಾತವಾಗಿದೆಯೆಂದು ಸ್ಪಷ್ಟವಾಗಿ ತಿಳಿಯದೆ ಆಹಾರ–ಪಾನೀಯ ಸೇವಿಸಿದರೆ ಉಪವಾಸ ಅಸಿಂಧುವಾಗುವುದಿಲ್ಲ. ಅದನ್ನು ಕಝಾ ನಿರ್ವಹಿಸಬೇಕಾಗಿಲ್ಲ. ಕಾರಣ, ಅಲ್ಲಾಹು ಹೇಳುತ್ತಾನೆ:

﴿وَكُلُوا۟ وَٱشْرَبُوا۟ حَتَّىٰ يَتَبَيَّنَ لَكُمُ ٱلْخَيْطُ ٱلْأَبْيَضُ مِنَ ٱلْخَيْطِ ٱلْأَسْوَدِ مِنَ ٱلْفَجْرِ﴾

"ಪ್ರಭಾತದ ಬಿಳಿ ನೂಲು ಮತ್ತು ಕಪ್ಪು ನೂಲು ಸ್ಪಷ್ಟವಾಗಿ

39 ಕುರ್‌ಆನ್ 2:286

ತಿಳಿಯುವ ತನಕ ತಿನ್ನಿರಿ ಮತ್ತು ಕುಡಿಯಿರಿ."[40]

ಆದರೆ ಸೂರ್ಯಾಸ್ತವಾಯಿತೋ ಇಲ್ಲವೋ ಎಂಬ ಸಂಶಯದಿಂದ ಅಥವಾ ಸೂರ್ಯಾಸ್ತವಾಗಿದೆ ಎಂದು ಸ್ಪಷ್ಟವಾಗಿ ತಿಳಿಯದೆ ಆಹಾರ–ಪಾನೀಯ ಸೇವಿಸಿದರೆ ಉಪವಾಸ ಅಸಿಂಧುವಾಗುತ್ತದೆ. ಆ ಉಪವಾಸವನ್ನು ಕಝಾ ನಿರ್ವಹಿಸಬೇಕಾಗಿದೆ. ಕಾರಣ, ಮೂಲನಿಯಮದ ಪ್ರಕಾರ, ಹಗಲನ್ನು ಪೂರ್ತಿಯಾಗಿ ಅನ್ನ ಪಾನೀಯಗಳಿಂದ ಮುಕ್ತವಾಗಿಡುವುದು ಕಡ್ಡಾಯವಾಗಿದೆ.

17. ರಮದಾನ್ ತಿಂಗಳಲ್ಲಿ ಹಗಲಿನ ವೇಳೆ ಯಾರಾದರೂ ಆಹಾರ–ಪಾನೀಯ ಸೇವಿಸುವುದು ಕಂಡರೆ ಏನು ಮಾಡಬೇಕು?

ರಮದಾನ್ ತಿಂಗಳಲ್ಲಿ ಹಗಲಿನ ವೇಳೆ ಯಾರಾದರೂ ಜ್ಞಾಪಕವಿಲ್ಲದೆ ಆಹಾರ–ಪಾನೀಯ ಸೇವಿಸುವುದನ್ನು

40 ಕುರ್‌ಆನ್ 2:187

ಕಂಡರೆ ಅವರಿಗೆ ಉಪವಾಸವನ್ನು ನೆನಪಿಸಿಕೊಡುವು-
ದು ಕಡ್ಡಾಯವಾಗಿದೆ. ಕೆಲವರು ಭಾವಿಸುವಂತೆ ಇಂತಹ
ಸಮಯದಲ್ಲಿ ಮೌನ ಪಾಲಿಸುವುದು ಸರಿಯಲ್ಲ. ಕಾರಣ,
ಇದು ದುರಾಚಾರವನ್ನು ವಿರೋಧಿಸುವುದಾಗಿದೆ. ಸದಾ-
ಚಾರವನ್ನು ಬೋಧಿಸುವುದು ಮತ್ತು ದುರಾಚಾರವನ್ನು
ವಿರೋಧಿಸುವುದು ಕಡ್ಡಾಯ. ಉಪವಾಸವಿರುವ ವ್ಯಕ್ತಿ
ರಮದಾನ್ ತಿಂಗಳಲ್ಲಿ ಹಗಲಿನ ವೇಳೆ ತಿನ್ನುವುದು ಮತ್ತು
ಕುಡಿಯುವುದು ದುರಾಚಾರವಾಗಿದೆ. ಆದರೆ ಜ್ಞಾಪಕ-
ವಿಲ್ಲದೆ ಹೀಗೆ ಮಾಡಿದರೆ ವಿನಾಯಿತಿಯಿದೆ. ಅದೇ
ಸಮಯ ಅವರಿಗೆ ಉಪವಾಸವನ್ನು ನೆನಪಿಸಿಕೊಡು-
ವುದು ಕಡ್ಡಾಯವಾಗಿದೆ. ಕಾರಣ, ಇದು ಒಳಿತು ಮತ್ತು
ದೇವಭಕ್ತಿಯ ವಿಷಯದಲ್ಲಿ ಪರಸ್ಪರ ಸಹಕರಿಸುವುದಾ-
ಗಿದೆ. ಅಲ್ಲಾಹು ತಆಲಾ ಹೇಳುತ್ತಾನೆ:

﴿وَتَعَاوَنُوا۟ عَلَى ٱلْبِرِّ وَٱلتَّقْوَىٰ﴾

"ಒಳಿತು ಮತ್ತು ದೇವಭಕ್ತಿಯ ವಿಷಯದಲ್ಲಿ ನೀವು ಪರಸ್ಪರ ಸಹಕರಿಸಿರಿ."[41]

18. ವೃದ್ಧರ ಉಪವಾಸ

ಹೆಚ್ಚಿನ ವಿದ್ವಾಂಸರ ಅಭಿಪ್ರಾಯ ಪ್ರಕಾರ ವೃದ್ಧ–ವೃದ್ಧೆಯರು, ಕಾಯಿಲೆ ವಾಸಿಯಾಗಬಹುದೆಂಬ ನಿರೀಕ್ಷೆಯಿಲ್ಲದ ರೋಗಿಗಳು ಮುಂತಾದವರಿಗೆ ಉಪವಾಸ ಆಚರಿಸುವ ಸಾಮರ್ಥ್ಯವಿಲ್ಲದಿದ್ದರೆ ಅವರು ಉಪವಾಸವನ್ನು ಬಿಟ್ಟು ಒಂದೊಂದು ಉಪವಾಸಕ್ಕೆ ಬದಲು ಒಬ್ಬೊಬ್ಬ ಬಡವನಿಗೆ ಆಹಾರ ನೀಡಿದರೆ ಸಾಕು.

ವಿದ್ವಾಂಸರು ಹೇಳುತ್ತಾರೆ: "ಉಪವಾಸ ಆಚರಿಸಲು ಸಾಧ್ಯವಿರುವವರು ಉಪವಾಸವನ್ನು ತೊರೆದರೆ ಅವರು ಅದಕ್ಕೆ ಪ್ರಾಯಶ್ಚಿತ್ತವಾಗಿ ಒಬ್ಬೊಬ್ಬ ಬಡವನಿಗೆ ಆಹಾರ ಕೊಡಬೇಕು ಎಂಬ ಆಯತ್ (2/184)ನಲ್ಲಿರುವ

41 ಕುರ್‌ಆನ್ 5:2

ವಿಧಿಯು ರದ್ದಾಗಿದ್ದರೂ ಸಹ ವೃದ್ಧಾಪ್ಯ, ವಾಸಿಯಾಗದ ಕಾಯಿಲೆಯಿರುವ ರೋಗಿ ಮುಂತಾದವರಿಗೆ ಉಪವಾಸ ಆಚರಿಸಲು ಸಾಧ್ಯವಾಗದಿದ್ದರೆ ಅವರ ಪಾಲಿಗೆ ಈ ಆಯತ್ತಿನಲ್ಲಿ ಹೇಳಲಾದ ಆಹಾರ ಕೊಡವುದು ಎಂಬ ವಿಧಿ ಈಗಲೂ ಚಾಲ್ತಿಯಲ್ಲಿದೆ."

ಸಲಫ್‌ಗಳ ಪೈಕಿ ಒಂದು ಗುಂಪು ವಿದ್ವಾಂಸರು ಹೇಳು-ತ್ತಾರೆ: "ಆಹಾರ ಕೊಡುವ ವಿಧಿಗಳೆಲ್ಲವೂ ರದ್ದಾಗಿವೆ."

ಆದರೆ ಇಬ್ನ್ ಅಬ್ಬಾಸ್(ﷺ) ರವರು ಹೇಳುತ್ತಾರೆ: "ಈ ಆಯತ್ ರದ್ದಾಗಿಲ್ಲ. ಬದಲಾಗಿ ಇದರ ನಿಯಮವು ಈಗಲೂ ಚಾಲ್ತಿಯಲ್ಲಿದೆ. ಇದು ವೃದ್ಧರು, ರೋಗಿಗಳು ಮುಂತಾದ ಉಪವಾಸ ಆಚರಿಸಲು ಸಾಮರ್ಥ್ಯವಿಲ್ಲದ-ವರ ಬಗ್ಗೆ ಅವತೀರ್ಣವಾದ ಆಯತ್ ಆಗಿದೆ."[42]

ಇಮಾಮ್ ಮಾಲಿಕ್(ﷺ) ಹೇಳುತ್ತಾರೆ: "ಅವರು ಪ್ರಾ-

42 ಶರ್ಹು ನ್ನವವೀ ಅಲಾ ಮುಸ್ಲಿಮ್ 8/21

ಯಶ್ಚಿತ್ತ ಕೊಡಬೇಕಾಗಿಲ್ಲ. ಕಾರಣ, ಅವರು ಉಪವಾಸವನ್ನು ತೊರೆಯುವುದು ಅದನ್ನು ಆಚರಿಸಲು ಸಾಧ್ಯವಿಲ್ಲದ ಕಾರಣದಿಂದಾಗಿದೆ. ಒಬ್ಬ ವ್ಯಕ್ತಿ ಕಾಯಿಲೆ ಪೀಡಿತನಾಗಿ ಮರಣಹೊಂದಿದರೆ ಅವನು ತೊರೆದ ಉಪವಾಸಗಳಿಗೆ ಪ್ರಾಯಶ್ಚಿತ್ತ ನೀಡುವುದು ಕಡ್ಡಾಯವಿಲ್ಲದಂತೆಯೇ ಇವರಿಗೂ ಪ್ರಾಯಶ್ಚಿತ್ತ ನೀಡುವುದು ಕಡ್ಡಾಯವಿಲ್ಲ."

ಆದರೆ ಬಹುಸಂಖ್ಯಾತ ವಿದ್ವಾಂಸರ ಅಭಿಪ್ರಾಯವೇ ಸರಿಯಾದ ಅಭಿಪ್ರಾಯ.[43] ಅಂದರೆ ಬಿಟ್ಟುಹೋದ ಒಂದೊಂದು ಉಪವಾಸಕ್ಕೆ ಬದಲಾಗಿ ಒಬ್ಬೊಬ್ಬ ಬಡವನಿಗೆ ಆಹಾರ ಕೊಡುವುದು.

19. ಉಪವಾಸವಿರುವಾಗ ಸ್ನಾನ ಮಾಡುವುದು

ಉಪವಾಸವಿರುವವರು ಸ್ನಾನ ಮಾಡಬಹುದು.

43 ಅಲ್‌ಮುಗ್ನೀ 4/396

ಸಹೀಹುಲ್ ಬುಖಾರಿ ಮತ್ತು ಸಹೀಹ್ ಮುಸ್ಲಿಮ್‌ನಲ್ಲಿ ವರದಿಯಾಗಿರುವ ಹದೀಸಿನಲ್ಲಿ ಆಯಿಶಾ(ﷺ) ಹೇ-ಳುತ್ತಾರೆ:

كَانَ رَسُولُ اللَّهِ صَلَّى اللَّهُ عَلَيْهِ وَسَلَّمَ يُدْرِكُهُ الْفَجْرُ فِي رَمَضَانَ وَهُوَ جُنُبٌ مِنْ غَيْرِ حُلُمٍ فَيَغْتَسِلُ وَيَصُومُ.

"ರಮದಾನ್ ತಿಂಗಳಲ್ಲಿ ಸ್ವಪ್ನ ಸ್ಖಲನವಲ್ಲದ ಬೇರೆ ಕಾರಣದಿಂದ ಪ್ರವಾದಿ(ﷺ) ಯವರಿಗೆ ಜನಾಬತ್ ಉಂಟಾದರೆ ಅವರು ಕೆಲವೊಮ್ಮೆ ಪ್ರಭಾತದ ತನಕ ಅದೇ ಸ್ಥಿತಿಯಲ್ಲಿರುತ್ತಿದ್ದರು. ನಂತರ ಸ್ನಾನ ಮಾಡಿ ಉಪವಾಸ ಮುಂದುವರಿಸುತ್ತಿದ್ದರು."[44]

ಉಪವಾಸವಿರುವವರು ದಾಹವಾದರೆ ಅಥವಾ ಶೆಖೆ-

44 ಅಲ್‌ಬುಖಾರಿ. ನೋಡಿ: ಫತ್‌ಹುಲ್ ಬಾರಿ 4/153; ಮುಸ್ಲಿಂ. ನೋಡಿ: ಶರ್ಹು ನ್ನವವೀ ಅಲಾ ಮುಸ್ಲಿಮ್ 7/221

ಯಾದರೆ ತಲೆಯ ಮೇಲೆ ನೀರು ಹೊಯ್ಯಬಹುದು.[45]

20. ಉಪವಾಸವಿರುವಾಗ ಬಾಯಿ ಮುಕ್ಕಳಿಸುವುದು ಮತ್ತು ಮೂಗಿಗೆ ನೀರೆಳೆಯುವುದು

ಉಪವಾಸವಿರುವವರು ಬಾಯಿ ಮುಕ್ಕಳಿಸಬಹುದು ಮತ್ತು ಮೂಗಿಗೆ ನೀರೆಳೆಯಬಹುದು. ಆದರೆ ಮೂಗಿಗೆ ನೀರೆಳೆಯುವಾಗ ಅತಿಯಾಗಿ ಎಳೆಯಬಾರದು. ಕಾರಣ, ಅದು ಗಂಟಲಿನೊಳಗೆ ಇಳಿಯುವ ಸಾಧ್ಯತೆಯಿದೆ. ಸುನನ್‌ನ ಗ್ರಂಥಗಳ ಲೇಖಕರು ವರದಿ ಮಾಡಿದ ಮತ್ತು ಇಬ್ನ್ ಖುಝೈಮ ಸಹೀಹ್ ಎಂದು ಹೇಳಿದ ಲಕೀತ್ ಇಬ್ನ್ ಸಬಿರ(﵁) ರವರ ಹದೀಸಿನಲ್ಲಿ ಪ್ರವಾದಿ(ﷺ) ಯವರು ಹೇಳುತ್ತಾರೆ:

«وَبَالِغْ فِي الِاسْتِنْشَاقِ إِلَّا أَنْ تَكُونَ صَائِمًا»

---

45 ಝೂದುಲ್ ಮಆದ್ 5/376, 380, 408, 430, 480; ಅಬೂದಾವೂದ್ 2365

“ನೀನು ಉಪವಾಸವಿರುವವನು ಅಲ್ಲದಿದ್ದರೆ (ವುದೂ ಮಾಡುವಾಗ) ಮೂಗಿಗೆ ಗರಿಷ್ಠವಾಗಿ ನೀರೆಳೆದುಕೋ.”[46]

ಮೂಗಿಗೆ ಬಿಂದು ಹಾಕುವುದನ್ನು ತೊರೆಯುವುದು ಒಳ್ಳೆಯದು. ಕಾರಣ, ಮೂಗು ಒಂದು ದ್ವಾರವಾಗಿರು-ವುದರಿಂದ ಅದು ಗಂಟಲಿಗೆ ತಲುಪುವ ಸಾಧ್ಯತೆಯಿದೆ. ಕಣ್ಣಿಗೆ ಅಥವಾ ಕಿವಿಗೆ ಬಿಂದು ಹಾಕುವುದು ಅಥವಾ ಕಣ್ಣಿಗೆ ಕಾಡಿಗೆ ಹಚ್ಚುವುದನ್ನು ರಾತ್ರಿಯ ತನಕ ಮುಂ-ದೂಡುವುದು ಒಳ್ಳೆಯದು. ಏಕೆಂದರೆ ವಿದ್ವಾಂಸರಲ್ಲಿ ಕೆಲವರು ಇದನ್ನು ವಿರೋಧಿಸಿದ್ದಾರೆ. ಅವರು ಹೇಳು-ತ್ತಾರೆ: “ಯಾವುದೆಲ್ಲ ಹೊಟ್ಟೆಯೊಳಗೆ ಸೇರುತ್ತದೋ ಅವೆಲ್ಲವೂ ಉಪವಾಸವನ್ನು ಅಸಿಂಧುಗೊಳಿಸುತ್ತದೆ.”

ಸರಿಯಾದ ಅಭಿಪ್ರಾಯ ಪ್ರಕಾರ ಕಣ್ಣಿಗೆ ಅಥವಾ ಕಿವಿಗೆ ಬಿಂದು ಹಾಕಿದರೆ ಅಥವಾ ಕಣ್ಣಿಗೆ ಕಾಡಿಗೆ ಹಚ್ಚಿದರೆ ಉಪವಾಸ ಅಸಿಂಧುವಾಗುವುದಿಲ್ಲ. ಕಾರಣ, ಅದಕ್ಕೆ

46 ಫತ್‌ಹುಲ್ ಬಾರಿ 4/160

ಸಹೀಹಾದ ಹದೀಸಿನ ಬೆಂಬಲವಿಲ್ಲ. ಆದರೂ ಉಪವಾಸವೆಂಬ ಮಹಾ ಆರಾಧನೆಯ ಬಗ್ಗೆ ಸೂಕ್ಷ್ಮತೆ ಪಾಲಿಸುವುದು ಅಗತ್ಯವಾಗಿರುವುದರಿಂದ ಅವುಗಳನ್ನು ತೊರೆಯುವುದು ಒಳ್ಳೆಯದು.

ಉಪವಾಸವಿರುವ ವ್ಯಕ್ತಿ ಚ್ಯೂಯಿಂಗ್ ಗಮ್ ಜಗಿಯಬಾರದು. ಏಕೆಂದರೆ ಅದರಿಂದ ರಸ ಹೊರಬರುತ್ತದೆ ಮತ್ತು ಜಗಿಯುವವನಿಗೆ ಅದು ಮಧುರವಾದ ರುಚಿಯನ್ನು ಕೊಡುತ್ತದೆ.

21. ಉಪವಾಸವಿರುವಾಗ ಸೂಜಿ ಚುಚ್ಚುವುದು

ಅನ್ನ–ಪಾನೀಯಗಳಿಗೆ ಪರ್ಯಾಯವಾಗಿ ನಿಲ್ಲುವ ಅಥವಾ ಅವುಗಳಿಗೆ ಸಮಾನವಾಗಿರುವ ವಸ್ತುಗಳನ್ನು ಸೇವಿಸಿದರೆ ಉಪವಾಸ ಅಸಿಂಧುವಾಗುತ್ತದೆ. ಉದಾಹರಣೆಗೆ, ಗ್ಲುಕೋಸ್ ಮೊದಲಾದ ದೇಹಕ್ಕೆ ಪುಷ್ಟಿ ಕೊಡುವ ವಸ್ತುಗಳನ್ನು ಸೂಜಿಯ ಮೂಲಕ ಸೇವಿಸು-

ವುದು. ಇದು ಅನ್ನ–ಪಾನೀಯಗಳಿಗೆ ಪರ್ಯಾಯವಾಗಿ ನಿಲ್ಲುವ ವಸ್ತುವಾಗಿದೆ. ಅದೇ ರೀತಿ ರಕ್ತವನ್ನು ಸೂಜಿಯ ಮೂಲಕ ದೇಹಕ್ಕೆ ಚುಚ್ಚುವುದರಿಂದ ಉಪವಾಸ ಅಸಿಂಧುವಾಗುತ್ತದೆ. ಕಾರಣ, ಇದು ಕೂಡ ಅನ್ನ–ಪಾನೀಯಗಳಿಗೆ ಪರ್ಯಾಯವಾಗಿದೆ. ಆದರೆ ದೇಹಕ್ಕೆ ಪುಷ್ಟಿ ಕೊಡುವ ವಸ್ತುಗಳನ್ನು ಸೂಜಿಯ ಮೂಲಕ ಸೇವಿಸುವವರು ಅಥವಾ ರಕ್ತವನ್ನು ಪಡೆಯುವವರು ಹೆಚ್ಚಿನ ಸಂದರ್ಭಗಳಲ್ಲೂ ರೋಗಿಗಳಾಗಿರುತ್ತಾರೆ. ಅಂತಹವರಿಗೆ ಉಪವಾಸ ತೊರೆಯುವುದಕ್ಕೆ ಅನುಮತಿಯಿದೆ.

ಆದರೆ ರೋಗ ನಿರೋಧಕ ಚುಚ್ಚುಮದ್ದುಗಳಿಂದ ಉಪವಾಸ ಅಸಿಂಧುವಾಗುವುದಿಲ್ಲ. ಅದನ್ನು ನರಕ್ಕೆ ಚುಚ್ಚಿದರೂ ಅಥವಾ ಮಾಂಸಖಂಡಕ್ಕೆ ಚುಚ್ಚಿದರೂ ಸರಿ. ಏಕೆಂದರೆ ಅದು ಅನ್ನ–ಪಾನೀಯವಲ್ಲ. ಅಥವಾ ಅವುಗಳಿಗೆ ಪರ್ಯಾಯವಾಗಿ ನಿಲ್ಲುವಂತದ್ದೂ ಅಲ್ಲ. ಆದರೆ ಉಪವಾಸವೆಂಬ ಮಹತ್ವಪೂರ್ಣ ಇಬಾದತ್ತಿನ

ಬಗ್ಗೆ ಹಾಗೂ ಇಂತಹ ಚುಚ್ಚುಮದ್ದಿನಿಂದ ಉಪವಾಸವು ಅಸಿಂಧುವಾಗುತ್ತದೆ ಎಂದು ಕೆಲವು ವಿದ್ವಾಂಸರು ಹೇಳಿರುವುದರಿಂದ ಅದರ ಬಗ್ಗೆ ಸೂಕ್ಷ್ಮತೆ ಪಾಲಿಸುವುದಕ್ಕಾಗಿ ಈ ಚುಚ್ಚುಮದ್ದನ್ನು ರಾತ್ರಿಯ ತನಕ ಮುಂದೂಡುವುದು ಒಳ್ಳೆಯದು. ಈ ಚುಚ್ಚುಮದ್ದಿನಿಂದ ಉಪವಾಸ ಅಸಿಂಧುವಾಗುತ್ತದೆಂದು ಹೇಳುವವರು ಅದಕ್ಕೆ ನೀಡುವ ಪುರಾವೆ ಅದು ಹೊಟ್ಟೆಯೊಳಗೆ ಸೇರುತ್ತದೆ ಎಂಬುದು. ಪ್ರವಾದಿ(ﷺ) ಯವರು ಹೇಳುತ್ತಾರೆ:

«دَعْ مَا يُرِيبُكَ إِلَى مَا لَا يُرِيبُكَ».

"ನಿನಗೆ ಸಂಶಯವಿರುವ ವಿಷಯವನ್ನು ನಿನಗೆ ಸಂಶಯವಿಲ್ಲದ ವಿಷಯಕ್ಕಾಗಿ ಬಿಟ್ಟುಬಿಡು."[47]

22. ಉಪವಾಸವಿರುವಾಗ ಲೋಬಾನ ಉರಿಸುವುದು

47 ಇದನ್ನು ಅತ್ತಿರ್ಮಿದಿ ಮತ್ತು ಅನ್ನಸಾಈ ವರದಿ ಮಾಡಿದ್ದಾರೆ. ಅತ್ತಿರ್ಮಿದಿ ಇದನ್ನು ಹದೀಸ್ ಹಸನ್ ಸಹೀಹ್ ಎಂದಿದ್ದಾರೆ.

ತಿಳುವಳಿಕೆಯಿದ್ದು, ಉದ್ದೇಶಪೂರ್ವಕ ಲೋಬಾನದ ಹೊಗೆಯನ್ನು ಮೂಗಿಗೆ ಎಳೆದುಕೊಂಡರೆ ಉಪವಾಸ ಅಸಿಂಧುವಾಗುತ್ತದೆ. ಇದು ಕರ್ಮಶಾಸ್ತ್ರ ವಿದ್ವಾಂಸರಲ್ಲಿ ಹೆಚ್ಚಿನವರ ಅಭಿಪ್ರಾಯವಾಗಿದೆ. ಕಾರಣ, ಅದು ಮೆದುಳನ್ನು ತಲುಪುತ್ತದೆ. ಆದರೆ ಅದು ಆಕಸ್ಮಾತ್ ಮೂಗಿನೊಳಗೆ ಪ್ರವೇಶಿಸಿದರೆ, ಅಥವಾ ಆಕಸ್ಮಾತ್ ಅದನ್ನು ಮೂಸಿದರೆ ಉಪವಾಸ ಅಸಿಂಧುವಾಗುವುದಿಲ್ಲ. ಕಾರಣ, ಅದು ಸ್ವಇಚ್ಛೆಯಿಂದ ಸಂಭವಿಸಿದ್ದಲ್ಲ. ಅಲ್ಲಾಹು ಹೇಳುತ್ತಾನೆ:

﴿ لَا يُكَلِّفُ ٱللَّهُ نَفْسًا إِلَّا وُسْعَهَا ﴾

“ಒಬ್ಬ ವ್ಯಕ್ತಿಯ ಮೇಲೆ ಅವನ ಸಾಮರ್ಥ್ಯಕ್ಕಿಂತಲೂ ಹೆಚ್ಚಿನದ್ದನ್ನು ಅಲ್ಲಾಹು ಕಡ್ಡಾಯಗೊಳಿಸುವುದಿಲ್ಲ.”[48]

23. ಉಪವಾಸವಿರುವಾಗ ಉದ್ದೇಶಪೂರ್ವಕ ವಾಂತಿ

---

48 ಕುರ್‌ಆನ್ 2:286

ಮಾಡುವುದು

ವಿದ್ವಾಂಸರ ಎರಡು ಅಭಿಪ್ರಾಯಗಳ ಪೈಕಿ ಅತ್ಯಂತ ಪ್ರಬಲ ಅಭಿಪ್ರಾಯದ ಪ್ರಕಾರ ಉದ್ದೇಶಪೂರ್ವಕ ವಾಂತಿ ಮಾಡಿದರೆ ಉಪವಾಸ ಅಸಿಂಧುವಾಗುತ್ತ-ದೆ. ಆದರೆ ಉದ್ದೇಶಪೂರ್ವಕವಲ್ಲದೆ ವಾಂತಿಯಾದ-ರೆ ಅಥವಾ ವಾಂತಿ ಮಾಡಲು ನಿರ್ಬಂಧಿತನಾದರೆ ಉಪವಾಸ ಅಸಿಂಧುವಾಗುವುದಿಲ್ಲ.

ಅಬೂ ಹುರೈರ(ﷺ) ರಿಂದ ವರದಿ: ಪ್ರವಾದಿ(ﷺ) ಯವರು ಹೇಳುತ್ತಾರೆ:

«مَنْ ذَرَعَهُ الْقَيْءُ فَلَيْسَ عَلَيْهِ قَضَاءٌ. وَمَنْ اسْتَقَاءَ عَمْدًا فَلْيَقْضِ».

“ಯಾರಾದರೂ ವಾಂತಿ ಮಾಡಲು ನಿರ್ಬಂಧಿತರಾದರೆ ಅವರು ಉಪವಾಸವನ್ನು ಕಝಾ ನಿರ್ವಹಿಸಬೇಕಾಗಿಲ್ಲ.

ಆದರೆ ಉದ್ದೇಶಪೂರ್ವಕ ವಾಂತಿ ಮಾಡಿದವರು ಉಪ-ವಾಸವನ್ನು ಕಝಾ ನಿರ್ವಹಿಸಬೇಕು."[49]

ಇಬ್ನುಲ್ ಮುಂದಿರ್(ﷺ) ಹೇಳುತ್ತಾರೆ:

"ಉದ್ದೇಶಪೂರ್ವಕ ವಾಂತಿ ಮಾಡಿದರೆ ಉಪವಾಸ ಅಸಿಂಧುವಾಗುತ್ತದೆ ಎಂಬ ವಿಷಯದಲ್ಲಿ ವಿದ್ವಾಂಸರಿಗೆ ಒಮ್ಮತವಿದೆ."[50]

ಯಾವ ರೀತಿಯಲ್ಲಿ ವಾಂತಿ ಮಾಡಿದರೂ —ಅದು ಉದ್ದೇಶಪೂರ್ವಕವಾದರೂ ಅಲ್ಲದಿದ್ದರೂ— ಉಪವಾಸ ಅಸಿಂಧುವಾಗುವುದಿಲ್ಲ ಎಂದು ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಇಬ್ನ್ ಮಸ್‌ಊ-ದ್(ರ) ಮತ್ತು ಇಬ್ನ್ ಅಬ್ಬಾಸ್(ರ) ರಿಂದ ಈ ಅಭಿ-

49 ಅತ್ತಿರ್ಮಿದಿ, ಅಬೂದಾವೂದ್, ಇಬ್ನ್ ಮಾಜ, ಅದ್ದಾರಕುತ್ನೀ. ಇದರ ಸನದ್ ಸಹೀಹ್ ಆಗಿದೆ. ಇದನ್ನು ಇಬ್ನ್ ಖುಝೈಮಾ (1960, 1961), ಇಬ್ನ್ ಹಿಬ್ಬಾನ್ (907) ಮತ್ತು ಅಲ್‌ಹಾಕಿಮ್ (1/427) ಸಹೀಹ್ ಎಂದಿದ್ದಾರೆ.

50 ಅಲ್‌ಮುಗ್ನೀ 4/368

ಪ್ರಾಯವನ್ನು ಉದ್ಧರಿಸಲಾಗಿದೆ.[51] ಆದರೆ ಮೊದಲ ಅಭಿಪ್ರಾಯವೇ ಸರಿಯಾದ ಅಭಿಪ್ರಾಯ. ಇದು ಬಹು-ಸಂಖ್ಯಾತ ವಿದ್ವಾಂಸರ ಅಭಿಪ್ರಾಯವಾಗಿದೆ.[52] ಕೈಯನ್ನು ಬಾಯೊಳಗೆ ತೂರಿಸುವ ಮೂಲಕ, ಅಥವಾ ವಾಂತಿ ಬರಿಸುವ ವಸ್ತುವನ್ನು ಮೂಸುವ ಮೂಲಕ, ಅಥವಾ ಕೈಯನ್ನು ಹೊಟ್ಟೆಯ ಮೇಲೆ ಅಥವಾ ಪಚನ ವ್ಯವ-ಸ್ಥೆಯ ಮೇಲೆ ಅದುಮುವ ಮೂಲಕ, ಅಥವಾ ಇತರ ಯಾವುದೇ ವಿಧಾನದ ಮೂಲಕ ಉದ್ದೇಶಪೂರ್ವಕ ವಾಂತಿ ಮಾಡಿದರೆ ಉಪವಾಸ ಅಸಿಂಧುವಾಗುತ್ತದೆ.[53] ಹೆಚ್ಚು ಬಲ್ಲವನು ಅಲ್ಲಾಹು.

24. ಉಪವಾಸವಿರುವಾಗ ಹಲ್ಲುಜ್ಜುವುದು

ಎಲ್ಲಾ ನಮಾಝ್ ಮತ್ತು ವುದೂವಿಗೆ ಮುಂಚೆ ಹಲ್ಲು-

---

51 ಅಲ್‌ಮುಗ್ನೀ 4/368
52 ಫತ್‌ಹುಲ್ ಬಾರಿ 4/174
53 ತಹ್ದೀಬು ಸ್ಸುನನ್ 6/513

ಜ್ಜುವುದು ಸುನ್ನತ್ತಾಗಿದೆ. ಸಹೀಹುಲ್ ಬುಖಾರಿ ಮತ್ತು ಸಹೀಹ್ ಮುಸ್ಲಿಮ್‌ನಲ್ಲಿರುವ ಅಬೂ ಹುರೈರ(ﷺ) ರವರ ಹದೀಸಿನಲ್ಲಿ ಪ್ರವಾದಿ(ﷺ) ಯವರು ಹೇಳುತ್ತಾರೆ:

«لَوْ لَا أَنْ أَشُقَّ عَلَى الْمُؤْمِنِينَ لَأَمَرْتُهُمْ بِالسِّوَاكِ عِنْدَ كُلِّ صَلَاةٍ».

"ವಿಶ್ವಾಸಿಗಳಿಗೆ ಕಷ್ಟವಾಗದು ಎಂದಾಗಿದ್ದರೆ ಎಲ್ಲಾ ನಮಾಝ್‌ಗಳಿಗೆ ಮುಂಚೆ ಹಲ್ಲುಜ್ಜುವಂತೆ ನಾನು ಅವರಿಗೆ ಆದೇಶಿಸುತ್ತಿದ್ದೆ."

ಸಹೀಹ್ ಮುಸ್ಲಿಮ್‌ನಲ್ಲಿರುವ ಝುಹೈರ್ ಇಬ್ನ್ ಹರ್ಬ್ (ﷺ) ರವರ ಹದೀಸಿನಲ್ಲಿ ಪ್ರವಾದಿ(ﷺ) ಯವರು ಹೇಳುತ್ತಾರೆ:

«لَوْ لَا أَنْ أَشُقَّ عَلَى أُمَّتِي لَأَمَرْتُهُمْ بِالسِّوَاكِ عِنْدَ كُلِّ صَلَاةٍ»

“ನನ್ನ ಸಮುದಾಯಕ್ಕೆ ಕಷ್ಟವಾಗದು ಎಂದಾಗಿದ್ದರೆ ಎಲ್ಲಾ ನಮಾಝ್‌ಗಳಿಗೆ ಮುಂಚೆ ಹಲ್ಲುಜ್ಜುವಂತೆ ನಾನು ಅವರಿಗೆ ಆದೇಶಿಸುತ್ತಿದ್ದೆ.”[54]

25. ಧರ್ಮಪರಿತ್ಯಾಗ ಮಾಡಿದವನ ಉಪವಾಸ

ಉಪವಾಸವಿರುವ ಸಂದರ್ಭ ಇಸ್ಲಾಂ ಧರ್ಮವನ್ನು ತ್ಯಜಿಸುವವರ (ಅಲ್ಲಾಹು ಕಾಪಾಡಲಿ) ಉಪವಾಸ ಅಸಿಂಧುವಾಗುತ್ತದೆ. ಈ ಬಗ್ಗೆ ವಿದ್ವಾಂಸರ ಮಧ್ಯೆ ಭಿನ್ನಾಭಿಪ್ರಾಯವಿಲ್ಲ. ಕಾರಣ ಅಲ್ಲಾಹು ಹೇಳುತ್ತಾನೆ:

﴿وَمَن يَكْفُرْ بِٱلْإِيمَٰنِ فَقَدْ حَبِطَ عَمَلُهُۥ﴾

“ಸತ್ಯವಿಶ್ವಾಸವನ್ನು ನಿಷೇಧಿಸುವವರ ಕರ್ಮಗಳು ನಿಷ್ಫ-

54 ಮುಸ್ಲಿಂ. ನೋಡಿ: ಶರ್ಹ್ ನ್ನವವೀ ಅಲಾ ಮುಸ್ಲಿಮ್ 3/143

ಲವಾಗುತ್ತವೆ."[55]

ಅವರು ಪುನಃ ಇಸ್ಲಾಮಿಗೆ ಮರಳಿದರೆ ಆ ದಿನದ ಉಪ-ವಾಸವನ್ನು ಕಝಾ ನಿರ್ವಹಿಸಬೇಕು. ಅವರು ಅದೇ ದಿನ ಇಸ್ಲಾಮಿಗೆ ಮರಳಿದರೂ ಸಹ. ಅವರ ಧರ್ಮ ಪರಿತ್ಯಾಗವು ನಂಬಿಕೆಯ ಮೂಲಕ, ಅಥವಾ ಕರ್ಮದ ಮೂಲಕ, ಅಥವಾ ಮಾತಿನ ಮೂಲಕವಾಗಿದ್ದರೂ ಅದ-ರಲ್ಲಿ ಯಾವುದೇ ವ್ಯತ್ಯಾಸವಿಲ್ಲ. ತಮಾಷೆಗಾಗಿ ಸತ್ಯನಿಷೇ-ಧದ ಮಾತನ್ನು ಹೇಳಿದವರ ವಿಧಿಯೂ ಇದೇ ಆಗಿದೆ. ಏಕೆಂದರೆ ಅಲ್ಲಾಹು ಹೇಳುತ್ತಾನೆ:

﴿ وَلَئِن سَأَلْتَهُمْ لَيَقُولُنَّ إِنَّمَا كُنَّا نَخُوضُ وَنَلْعَبُ ۚ قُلْ أَبِاللَّهِ وَآيَاتِهِ وَرَسُولِهِ كُنتُمْ تَسْتَهْزِئُونَ ﴿٦٥﴾ لَا تَعْتَذِرُوا قَدْ كَفَرْتُم بَعْدَ إِيمَانِكُمْ ﴾

55 ಕುರ್‌ಆನ್ 5:5

“ತಾವು ಅವರೊಂದಿಗೆ ಕೇಳಿದರೆ ಅವರು ಹೇಳುವರು: ನಾವು ಕೇವಲ ಹರಟೆ ಹೊಡೆಯುತ್ತಿದ್ದೆವು ಮತ್ತು ಆಟ-ವಾಡುತ್ತಿದ್ದೆವು. ಹೇಳಿರಿ: ನೀವು ಅಲ್ಲಾಹನನ್ನು, ಅವನ ದೃಷ್ಟಾಂತಗಳನ್ನು ಮತ್ತು ಅವನ ರಸೂಲರನ್ನು ಗೇಲಿ ಮಾಡುತ್ತೀರಾ? ನೆಪಗಳನ್ನು ಹೇಳಬೇಡಿ. ಸತ್ಯವಿಶ್ವಾಸವಿ-ಟ್ಟ ಬಳಿಕ ನೀವು ಸತ್ಯನಿಷೇಧಿಗಳಾಗಿ ಮಾರ್ಪಟ್ಟಿದ್ದೀರಿ.”[56]

ಉಪವಾಸವು ನಮಾಝ್, ಹಜ್ಜ್ ಮುಂತಾದ ಇಬಾದ-ತ್‌ಗಳಂತೆ ಒಂದು ಇಬಾದತ್ ಆಗಿದೆ. ನಿಯ್ಯತ್ ಇಬಾದ-ತ್ತಿನ ಷರತ್ತುಗಳಲ್ಲೊಂದು. ಧರ್ಮಪರಿತ್ಯಾಗ ಮಾಡಿದರೆ ನಿಯ್ಯತ್ ನಷ್ಟವಾಗುತ್ತದೆ. ಮಾತ್ರವಲ್ಲ, ನಮಾಝ್, ಉಪವಾಸ ಮುಂತಾದ ಇಬಾದತ್‌ಗಳು ಸತ್ಯನಿಷೇಧಕ್ಕೆ ವಿರುದ್ಧವಾಗಿವೆ.[57]

26. ಉಪವಾಸ ತೊರೆಯುತ್ತೇನೆಂದು ನಿಯ್ಯತ್

56 ಕುರ್‌ಆನ್ 9:65-66
57 ಅಲ್‌ಮುಗ್ನೀ 4/369-370

ಮಾಡುವುದು

ವಿದ್ವಾಂಸರ ಎರಡು ಅಭಿಪ್ರಾಯಗಳ ಪೈಕಿ ಅತ್ಯಂತ ಸಹೀಹಾದ ಅಭಿಪ್ರಾಯ ಪ್ರಕಾರ ಉಪವಾಸ ತೊರೆ-ಯುತ್ತೇನೆಂದು ನಿಯ್ಯತ್ ಮಾಡಿದರೆ ಉಪವಾಸ ಅಸಿಂ-ಧುವಾಗುತ್ತದೆ. ಕಾರಣ, ಉಪವಾಸ ಒಂದು ಇಬಾದತ್. ನಿಯ್ಯತ್ ಅದರ ಷರತ್ತುಗಳಲ್ಲೊಂದು. ಉಪವಾಸ ತೊರೆಯುತ್ತೇನೆಂದು ನಿಯ್ಯತ್ ಮಾಡಿದರೆ ನಿಯ್ಯತ್ ಇಲ್ಲದಾಗುವ ಕಾರಣ ಇಬಾದತ್ ಅಸಿಂಧುವಾಗುತ್ತದೆ. ಉಪವಾಸದ ಷರತ್ತು ನಷ್ಟವಾದರೆ ಉಪವಾಸವೂ ನಷ್ಟ-ವಾಗುತ್ತದೆ. ಸಹೀಹುಲ್ ಬುಖಾರಿ ಮತ್ತು ಸಹೀಹ್ ಮು-ಸ್ಲಿಮ್‌ನಲ್ಲಿರುವ ಹದೀಸಿನಲ್ಲಿ ಪ್ರವಾದಿ(ﷺ) ಹೇಳುತ್ತಾರೆ:

«إِنَّمَا الْأَعْمَالُ بِالنِّيَّاتِ، وَإِنَّمَا لِكُلِّ امْرِءٍ مَا نَوَى».

“ನಿಯ್ಯತ್‌ಗಳನ್ನು ಅವಲಂಬಿಸಿ ಕರ್ಮಗಳಿಗೆ ಪ್ರತಿಫಲ ಸಿಗುತ್ತದೆ. ಪ್ರತಿಯೊಬ್ಬ ವ್ಯಕ್ತಿಗೂ ಅವನು ನಿಯ್ಯತ್ ಮಾಡಿದ್ದು ಮಾತ್ರ ಸಿಗುತ್ತದೆ.”

ಹಂಬಲೀ ವಿದ್ವಾಂಸರಲ್ಲಿ ಒಬ್ಬರಾದ ಇಬ್ನ್ ಹಾಮಿದ್ (ರ) ಹೇಳುತ್ತಾರೆ: “ಉಪವಾಸ ತೊರೆಯುತ್ತೇನೆಂದು ನಿಯ್ಯತ್ ಮಾಡಿದರೆ ಉಪವಾಸ ಅಸಿಂಧುವಾಗುವುದಿಲ್ಲ.”[58] ಆದರೆ ಇದೊಂದು ದುರ್ಬಲ ಅಭಿಪ್ರಾಯ. ಮೊದಲನೇ ಅಭಿಪ್ರಾಯ ಸರಿಯಾದ ಅಭಿಪ್ರಾಯವಾಗಿದೆ. ಹದೀಸ್ ಕೂಡ ಅದನ್ನೇ ಬೆಂಬಲಿಸುತ್ತದೆ. ಏಕೆಂದರೆ ನಿಯ್ಯತ್ತಿನ ಮೇಲೆ ಕರ್ಮಗಳನ್ನು ನಿರ್ಮಿಸಲಾಗುತ್ತದೆ. ನಿಯ್ಯತ್ತನ್ನು ನೋಡಿ ಕರ್ಮಗಳನ್ನು ಪರಿಗಣಿಸಲಾಗುತ್ತದೆ. ನಿಯ್ಯತ್ ಕರ್ಮವನ್ನು ಸರಿಪಡಿಸುತ್ತದೆ. ನಿಯ್ಯತ್ ಇಲ್ಲದೆ ಹೋದರೆ ಇಬಾದತ್ ಶೂನ್ಯವಾಗುತ್ತದೆ, ನಿಷ್ಫಲವಾಗುತ್ತದೆ. ನಿಯ್ಯತ್ ರೂಢಿಯಾಗಿ ಮಾಡುವ

58 ಅಲ್‌ಮುಗ್ನೀ 4/370

ಕರ್ಮಗಳನ್ನು ಮತ್ತು ಇಬಾದತ್‌ಗಳನ್ನು ಬೇರ್ಪಡಿಸುತ್ತ-ದೆ. ಆದುದರಿಂದ ಎಲ್ಲ ಕರ್ಮಗಳಿಗೂ ನಿಯ್ಯತ್ ಅತ್ಯಾ-ವಶ್ಯಕ. ಕರ್ಮಗಳೆಲ್ಲವೂ ನಿಯ್ಯತ್‌ಗಳನ್ನು ಅವಲಂಬಿ-ಸಿಕೊಂಡಿವೆ.

27. ಋತುಸ್ರಾವವಿರುವವರ ಮತ್ತು ಹೆರಿಗೆ ರಕ್ತವಿರುವ-ವರ ಉಪವಾಸ

ಋತುಸ್ರಾವವಿರುವವರು ಮತ್ತು ಹೆರಿಗೆ ರಕ್ತವಿರುವವರು ಉಪವಾಸ ಆಚರಿಸಬಾರದು. ಅದು ನಿಷಿದ್ಧ. ರಮದಾನ್ ತಿಂಗಳಲ್ಲಿ ಅವರು ಉಪವಾಸ ತೊರೆದು ನಂತರ ಕಝಾ ನಿರ್ವಹಿಸಬೇಕು. ಇನ್ನು ಅವರು ರಮದಾನ್ ತಿಂಗಳಲ್ಲಿ ಉಪವಾಸ ಆಚರಿಸಿದರೂ ಅದು ಸಿಂಧುವಲ್ಲ. ಈ ವಿಷ-ಯದಲ್ಲಿ ವಿದ್ವಾಂಸರಿಗೆ ಒಮ್ಮತವಿದೆ.[59]

ಸಹೀಹುಲ್ ಬುಖಾರಿ ಮತ್ತು ಸಹೀಹ್ ಮುಸ್ಲಿಮ್‌ನಲ್ಲಿ-

59 ಅಲ್‌ಮುಗ್ನೀ 4/397

ರುವ ಹದೀಸಿನಲ್ಲಿ ಮುಆಝ ಎಂಬ ಮಹಿಳೆ ಆಯಿಶಾ (ರಜಿಯಲ್ಲಾಹು ಅನ್ಹಾ) ರೊಂದಿಗೆ ಕೇಳುತ್ತಾರೆ: "ಋತುಸ್ರಾವವಿರುವ ಮಹಿಳೆಯರು ಶುದ್ಧಿಯಾದ ನಂತರ ಉಪವಾಸವನ್ನು ಕಝಾ ನಿರ್ವಹಿಸುತ್ತಾರೆ. ಆದರೆ ನಮಾಝನ್ನು ಕಝಾ ನಿರ್ವಹಿಸುವುದಿಲ್ಲವೇಕೆ?" ಆಗ ಆಯಿಶಾ(ರಜಿಯಲ್ಲಾಹು ಅನ್ಹಾ) ಕೇಳುತ್ತಾರೆ: "ನೀನು ಹರೂರಿಯ್ಯ ಪಂಗಡದವಳಾ?" ಆಕೆ ಹೇಳುತ್ತಾರೆ: "ನಾನು ಹರೂರಿಯ್ಯ ಪಂಗಡವಳಲ್ಲ. ಆದರೂ ಇದು ನನ್ನ ಒಂದು ಪ್ರಶ್ನೆ." ಆಗ ಆಯಿಶಾ (ರಜಿಯಲ್ಲಾಹು ಅನ್ಹಾ) ಹೇಳುತ್ತಾರೆ:

كَانَ يُصِيبُنَا ذَلِكَ فَنُؤْمَرُ بِقَضَاءِ الصَّوْمِ وَلَا نُؤْمَرُ بِقَضَاءِ الصَّلَاةِ.

"ಪ್ರವಾದಿ(ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಯವರ ಕಾಲದಲ್ಲಿ ನಮಗೆ ಋತುಸ್ರಾವವಾಗುತ್ತಿತ್ತು. ಆಗ ಉಪವಾಸವನ್ನು ಕಝಾ ನಿರ್ವಹಿಸುವಂತೆ ನಮಗೆ ಆದೇಶಿಸಲಾಗುತ್ತಿತ್ತು. ಆದರೆ

ನಮಾಝುನ್ನು ಕಝಾ ನಿರ್ವಹಿಸುವಂತೆ ನಮಗೆ ಆದೇಶಿಸಲಾಗುತ್ತಿರಲಿಲ್ಲ."[60]

ಸಹೀಹುಲ್ ಬುಖಾರಿಯಲ್ಲಿರುವ ಅಬೂ ಸಈದ್ ಅಲ್‌ಖುದ್ರಿ(ﷺ) ಯವರ ಹದೀಸಿನಲ್ಲಿ ಪ್ರವಾದಿ(ﷺ) ಯವರು ಹೇಳುತ್ತಾರೆ:

«أَلَيْسَ إِذَا حَاضَتْ لَمْ تُصَلِّ وَلَمْ تَصُمْ؟» قُلْنَ: بَلَى. قَالَ: «فَذَلِكَ مِنْ نُقْصَانِ دِينِهَا».

"ಮಹಿಳೆಗೆ ಋತುಸ್ರಾವವಾದರೆ ಆಕೆ ನಮಾಝ್ ನಿರ್ವಹಿಸುವುದಿಲ್ಲ ಮತ್ತು ಉಪವಾಸ ಆಚರಿಸುವುದಿ-

---

60 ಅಲ್‌ಬುಖಾರಿ. ನೋಡಿ: ಫತ್‌ಹುಲ್ ಬಾರಿ 1/421; ಮುಸ್ಲಿಂ. ನೋಡಿ: ಶರ್ಹುನ್ನವವೀ ಅಲಾ ಮುಸ್ಲಿಂ 4/28; ಅಬೂ ದಾವೂದ್ 1/60; ಅತ್ತಿರ್ಮಿದಿ. ನೋಡಿ: ಅಲ್‌ಅಹ್ವದೀ 2/311; ಅನ್ನಸಾಈ 1/157, 4/162; ಇಬ್ನ್ ಮಾಜ 1/207-533; ಅದ್ದಾರಿಮೀ 1/233; ಅಹ್ಮದ್ 6/142, 232; ತಹ್ದೀಬುಸ್ಸುನನ್ 6/512

ಲ್ಲ ಅಲ್ಲವೇ?" ಅವರು (ಮಹಿಳೆಯರು) ಹೇಳಿದರು: "ಹೌದು". ಪ್ರವಾದಿ(ﷺ) ಯವರು ಹೇಳಿದರು: "ಅದು ಅವರ ಧರ್ಮದ ಅಪೂರ್ಣತೆಯಾಗಿದೆ."

ಇದನ್ನು ಅಲ್‌ಬುಖಾರಿ ತಮ್ಮ ಕಿತಾಬುಲ್ ಹೈದ್‌ನಲ್ಲಿ "ಋತುಸ್ರಾವವಿರುವ ಮಹಿಳೆ ಉಪವಾಸ ತೊರೆಯು-ವುದು" ಎಂಬ ಅಧ್ಯಾಯದಲ್ಲಿ ಉದ್ಧರಿಸಿದ್ದಾರೆ.[61] ಅದೇ ರೀತಿ ಕಿತಾಬು ಸ್ಸೌಮ್‌ನಲ್ಲಿ "ಋತುಸ್ರಾವವಿರುವ ಮಹಿಳೆ ಉಪವಾಸ ಮತ್ತು ನಮಾಝನ್ನು ತೊರೆಯುವುದು" ಎಂಬ ಅಧ್ಯಾಯದಲ್ಲಿ ಉದ್ಧರಿಸಿದ್ದಾರೆ.[62]

ಇದು ಅಲ್ಲಾಹು ಮಹಿಳೆಯರಿಗೆ ತೋರಿಸಿದ ಕರುಣೆ-ಯಾಗಿದೆ. ಏಕೆಂದರೆ ನಮಾಝ್ ದಿನದಲ್ಲಿ ಐದು ಬಾರಿ ಬರುವುದರಿಂದ ಮಹಿಳೆಯರಿಗೆ ಅದನ್ನು ಕಝಾ ನಿರ್ವ-ಹಿಸುವುದು ಕಷ್ಟವಾಗುತ್ತದೆ. ಆದರೆ ಉಪವಾಸ ವರ್ಷದ-

61 ಅಲ್‌ಬುಖಾರಿ. ನೋಡಿ: ಫತ್‌ಹುಲ್ ಬಾರಿ 1/405
62 ಅಲ್‌ಬುಖಾರಿ. ನೋಡಿ: ಫತ್‌ಹುಲ್ ಬಾರಿ 4/191

ಲ್ಲೊಂದು ಬಾರಿ ಮಾತ್ರ ಬರುತ್ತದೆ. ಆದ್ದರಿಂದ ಅದನ್ನು ಕಝಾ ನಿರ್ವಹಿಸುವುದು ಕಷ್ಟವಾಗುವುದಿಲ್ಲ. ಇದರಲ್ಲಿ ಮಹಿಳೆಯರಿಗೆ ಒಳಿತಿದೆ.

ಋತುಸ್ರಾವವಿರುವ ಮತ್ತು ಹೆರಿಗೆ ರಕ್ತವಿರುವ ಮಹಿಳೆಯರ ವಿಧಿ ಒಂದೇ. ಕಾರಣ, ಋತುಸ್ರಾವ ಮತ್ತು ಹೆರಿಗೆಯ ರಕ್ತ ಒಂದೇ. ಅವೆರಡರ ವಿಧಿಯೂ ಒಂದೇ. ಉಪವಾಸವಿರುವ ಸಂದರ್ಭ ಮಹಿಳೆಯಲ್ಲಿ ಋತುಸ್ರಾವ ಅಥವಾ ಹೆರಿಗೆ ರಕ್ತ ಗೋಚರವಾದರೆ ಅವರ ಉಪವಾಸ ಅಸಿಂಧುವಾಗುತ್ತದೆ. ಅದು ದಿನದ ಆರಂಭದಲ್ಲಾದರೂ ಕೊನೆಯಲ್ಲಾದರೂ ಸರಿ. ಸೂರ್ಯಾಸ್ತಕ್ಕೆ ಒಂದು ನಿಮಿಷ ಮುಂಚೆಯಾದರೂ ಸರಿ. ಆಕೆ ಆ ಉಪವಾಸವನ್ನು ಕಝಾ ನಿರ್ವಹಿಸಬೇಕು.

ಮೂಗಿನಿಂದ ರಕ್ತ ಸೋರುವುದು, ಗಾಯದಿಂದ ರಕ್ತ ಬರುವುದು ಮೊದಲಾದ ಕಾರಣಗಳಿಂದ ಗಂಡಸರಲ್ಲಿ ಅಥವಾ ಹೆಂಗಸರಲ್ಲಿ ರಕ್ತ ಕಂಡುಬಂದರೆ ಉಪವಾಸ

ಅಸಿಂಧುವಾಗುವುದಿಲ್ಲ. ವ್ರಣ ಮುಂತಾದವುಗಳಿಂದ ಹೊರಬರುವ ರಕ್ತದಿಂದಲೂ ಉಪವಾಸ ಅಸಿಂಧುವಾಗುವುದಿಲ್ಲ. ಮಹಿಳೆಯರಿಗೆ ರಕ್ತಸ್ರಾವವಾದರೆ ಉಪವಾಸ ಅಸಿಂಧುವಾಗುವುದಿಲ್ಲ. ರಕ್ತಸ್ರಾವದಿಂದ ನಮಾಝ್, ತವಾಫ್ ಮೊದಲಾದವುಗಳನ್ನು ನಿರ್ವಹಿಸಲು ಅಡ್ಡಿಯಿಲ್ಲದಂತೆ ಉಪವಾಸ ನಿರ್ವಹಿಸಲೂ ಅಡ್ಡಿಯಿಲ್ಲ. ಇದು ಉಪವಾಸವನ್ನು ಅಸಿಂಧುಗೊಳಿಸುತ್ತದೆ ಎನ್ನುವುದಕ್ಕೆ ಯಾವುದೇ ಪುರಾವೆಯಿಲ್ಲ. ಅದೇ ರೀತಿ ಒಸಡಿನಿಂದ ರಕ್ತ ಬಂದರೂ ಉಪವಾಸ ಅಸಿಂಧುವಾಗುವುದಿಲ್ಲ. ಆದರೆ ಆ ರಕ್ತವನ್ನು ನುಂಗಬಾರದು. ಏಕೆಂದರೆ ಇವು ಯಾವುದೂ ಸ್ವಇಚ್ಛೆಯಿಂದ ಉಂಟಾಗುವುದಲ್ಲ. ಇವುಗಳ ಕಾರಣದಿಂದ ಉಪವಾಸ ಅಸಿಂಧುವಾಗುತ್ತದೆ ಎನ್ನುವುದಕ್ಕೆ ಯಾವುದೇ ಪುರಾವೆಯಿಲ್ಲ. ಇದು ಉಪವಾಸದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಉಪವಾಸ ಅಸಿಂಧುವಾಗುತ್ತದೆ ಎನ್ನುವುದಕ್ಕೆ

ಸ್ಪಷ್ಟ ಪುರಾವೆಯಿರುವ ವಿಷಯದ ಹೊರತು ಇನ್ನಾವು-ದರಿಂದಲೂ ಉಪವಾಸ ಅಸಿಂಧುವಾಗುವುದಿಲ್ಲ. ಹೆಚ್ಚು ಬಲ್ಲವನು ಅಲ್ಲಾಹು.

28. ಹಿಜಾಮ ಮಾಡುವುದು

ಉಲಮಾಗಳ ಎರಡಭಿಪ್ರಾಯಗಳಲ್ಲಿ ಅತ್ಯಂತ ಸಹೀಹಾದ ಅಭಿಪ್ರಾಯ ಪ್ರಕಾರ ಹಿಜಾಮ ಮಾಡಿ ರಕ್ತ ಹೊರಬಂದರೆ ಉಪವಾಸ ಅಸಿಂಧುವಾಗುತ್ತದೆ. ಅಬೂ-ದಾವೂದ್(ﷺ) ಸೌಬಾನ್(﵁) ರಿಂದ ವರದಿ ಮಾಡಿದ ಹದೀಸಿನಲ್ಲಿ ಪ್ರವಾದಿ(ﷺ) ಯವರು ಹೇಳುತ್ತಾರೆ:

«أَفْطَرَ الْحَاجِمُ وَالْمَحْجُومُ».

“ಹಿಜಾಮ ಮಾಡಿದವನ ಮತ್ತು ಮಾಡಿಸಿದವನ ಉಪವಾಸ ಅಸಿಂಧುವಾಗಿದೆ.”[63]

---

63 ಅಬೂದಾವೂದ್. ನೋಡಿ: ಔನುಲ್ ಮಅ್‌ಬೂದ್ 6/493; ಇಬ್ನ್ ಮಾಜ (1680); ಅದ್ದಾರಿಮೀ 2/14-15; ಅತ್ತಹಾವೀ

ಶದ್ದಾದ್ ಇಬ್ನ್ ಔಸ್(ﷺ) ರವರು ಹೇಳುತ್ತಾರೆ: ಒಮ್ಮೆ ಪ್ರವಾದಿ(ﷺ) ಯವರು ನನ್ನ ಕೈ ಹಿಡಿದು ಬಕೀಅ್‌ನ ಸಮೀಪ ಬಂದರು. ಆಗ ಅಲ್ಲಿ ಒಬ್ಬ ವ್ಯಕ್ತಿ ಹಿಜಾಮ ಮಾಡುವುದನ್ನು ಕಂಡರು. ಅದು ರಮದಾನ್ ತಿಂಗಳ ಹದಿನೆಂಟನೇ ದಿನವಾಗಿತ್ತು. ಪ್ರವಾದಿ(ﷺ) ಯವರು ಹೇಳಿದರು:

«أَفْطَرَ الْحَاجِمُ وَالْمَحْجُومُ».

"ಹಿಜಾಮ ಮಾಡಿದವನ ಮತ್ತು ಮಾಡಿಸಿದವನ ಉಪವಾಸ ಅಸಿಂಧುವಾಗಿದೆ."[64]

ಪುಟ 349; ಇಬ್ನುಲ್ ಜಾರೂದ್ ಪುಟ 198; ಅಬ್ದುರ್ರಝ್ಝಾಕ್ (7522). ಇಬ್ನ್ ಖುಝೈಮಃ, ಇಬ್ನ್ ಹಿಬ್ಬಾನ್, ಅಲ್‌ಹಾಕಿಂ, ಅಲ್‌ಬುಖಾರಿ, ಅಲೀ ಇಬ್ನುಲ್ ಮದೀನಿ, ಅನ್ನವವೀ ಮೊದಲಾದವರು ಇದನ್ನು ಸಹೀಹ್ ಎಂದಿದ್ದಾರೆ. ನೋಡಿ: ಇಮಾಂ ಇಬ್ನುಲ್ ಖಯ್ಯಿಂರವರ ತಹ್‌ಝೀಬು ಸ್ಸುನನ್ 4/494

64 ಅಬೂದಾವೂದ್. ನೋಡಿ: ಔನುಲ್ ಮಅ್‌ಬೂದ್ 6/495-496; ಅಶ್ಶಾಫಿಈ 1/257; ಅದ್ದಾರಿಮೀ 2/14; ಅಬ್ದುರ್ರಝ್ಝಾಕ್ (7520); ಇಬ್ನ್ ಮಾಜ (1681); ಅಲ್‌ಹಾಕಿಂ 1/428;

ಈ ವಿಷಯದಲ್ಲಿ ರಾಫಿಅ್ ಇಬ್ನ್ ಖುದೈಜ್, ಅಬೂ ಹುರೈರ, ಬಿಲಾಲ್, ಉಸಾಮ ಇಬ್ನ್ ಝೈದ್, ಮಅ್ಕಿಲ್ ಇಬ್ನ್ ಸಿನಾನ್, ಅಲೀ ಇಬ್ನ್ ಅಬೀ ತಾಲಿಬ್, ಸಅ್ದ್ ಇಬ್ನ್ ಅಬೀ ವಕ್ಕಾಸ್, ಅಬೂ ಝೈದ್ ಅಲ್‌ಅನ್ಸಾರೀ, ಅಬೂ ಮೂಸಾ ಅಲ್‌ಅಶ್‌ಅರೀ, ಇಬ್ನ್ ಅಬ್ಬಾಸ್, ಇಬ್ನ್ ಉಮರ್ ಮುಂತಾದವರಿಂದಲೂ ಹದೀಸ್ ವರದಿಯಾಗಿದೆ.[65]

ಹಿಜಾಮ ಮಾಡುವುದರಿಂದ ಉಪವಾಸ ಅಸಿಂಧುವಾಗುತ್ತದೆ ಎಂದು ಅಹ್ಮದ್ ಇಬ್ನ್ ಹಂಬಲ್, ಇಸ್‌ಹಾಕ್ ಇಬ್ನ್ ರಾಹವೈಹಿ, ಅಬೂ ಸೌರ್ ಮೊದಲಾದವರು

ಅತ್ತಹಾವೀ ಪುಟ 349; ಅಲ್‌ಬೈಹಕೀ 4/265. ಇದರ ಸನದ್ ಸಹೀಹ್. ಅಹ್ಮದ್, ಇಸ್‌ಹಾಕ್, ಅಲ್‌ಬುಖಾರಿ, ಅಲೀ ಇಬ್ನುಲ್ ಮದೀನೀ, ಅದ್ದಾರಿಮೀ, ಇಬ್ರಾಹೀಂ ಅಲ್‌ಹರಬೀ ಮೊದಲಾದವರು ಇದನ್ನು ಸಹೀಹ್ ಎಂದಿದ್ದಾರೆ. ನೋಡಿ: ಇಮಾಂ ಇಬ್ನುಲ್ ಖಯ್ಯಿಂರವರ ತಹ್‌ಝೀಬು ಸ್ಸುನನ್ 4/494-496.

65 ತಹ್ದೀಬು ಸ್ಸುನನ್ 4/511

ಅಭಿಪ್ರಾಯಪಟ್ಟಿದ್ದಾರೆ. ಇದು ಅತಾಅ್, ಅಬ್ದುರ್ರಹ್ಮಾನ್ ಇಬ್ನ್ ಮಹ್ದೀ, ಔಝಾಈ, ಅಲ್‌ಹಸನ್, ಇಬ್ನ್ ಸೀರೀನ್ ಮುಂತಾದವರ ಅಭಿಪ್ರಾಯವೂ ಆಗಿದೆ. ಶಾಫಿಈಗಳಲ್ಲಿ ಇಬ್ನ್ ಖುಝೈಮ, ಇಬ್ನುಲ್ ಮುಂದಿರ್, ಅಬುಲ್ ವಲೀದ್ ಅನ್ನೈಸಾಬೂರಿ, ಇಬ್ನ್ ಹಿಬ್ಬಾನ್ ಮೊದಲಾದವರು ಇದೇ ರೀತಿ ಅಭಿಪ್ರಾಯಪಟ್ಟಿದ್ದಾರೆ. ಅಲೀ ಇಬ್ನ್ ಅಬೀ ತಾಲಿಬ್, ಅಬೂ ಮೂಸಾ ಅಲ್‌ಅಶ್‌ಅರೀ ಮುಂತಾದ ಸಹಾಬಾಗಳು ಕೂಡ ಇದೇ ಅಭಿಪ್ರಾಯದಲ್ಲಿದ್ದಾರೆ. ಇಬ್ನ್ ಉಮರ್, ಇಬ್ನ್ ಅಬ್ಬಾಸ್, ಅಬೂ ಮೂಸಾ, ಅನಸ್ ಇಬ್ನ್ ಮಾಲಿಕ್ ಮೊದಲಾದ ಸಹಾಬಾಗಳು ರಾತ್ರಿ ವೇಳೆಯಲ್ಲಿ ಹಿಜಾಮ ಮಾಡುತ್ತಿದ್ದರು.

ಶೈಖುಲ್ ಇಸ್ಲಾಂ ಇಬ್ನ್ ತೈಮಿಯ್ಯ ಮತ್ತು ಅವರ ಶಿಷ್ಯ ಅಲ್ಲಾಮಾ ಇಬ್ನುಲ್ ಕಯ್ಯಿಂ ಇದೇ ಅಭಿಪ್ರಾಯ ಸ್ವೀಕರಿಸಿದ್ದಾರೆ.[66]

---

66 ಫತ್‌ಹುಲ್ ಬಾರಿ 4/174; ಅಲ್‌ಮುಗ್ನೀ 4/350-351; ಔನುಲ್

ಆದರೆ ಬಹುಸಂಖ್ಯಾತ ವಿದ್ವಾಂಸರು ಹಿಜಾಮ ಮಾಡು-ವುದರಿಂದ ಉಪವಾಸ ಅಸಿಂಧುವಾಗುವುದಿಲ್ಲ ಎಂದು ಅಭಿಪ್ರಾಯಪಡುತ್ತಾರೆ. ಇದು ಇಮಾಂ ಮಾಲಿಕ್, ಅಶ್ಶಾಫಿಈ, ಅಬೂ ಹನೀಫ ಮುಂತಾದವರ ಅಭಿ-ಪ್ರಾಯವಾಗಿದೆ. ಅಬೂ ಸಈದ್ ಅಲ್‌ಖುದ್ರೀ, ಇಬ್ನ್ ಮಸ್‌ಊದ್, ಉಮ್ಮು ಸಲಮಾ, ಇಬ್ನ್ ಅಬ್ಬಾಸ್, ಸಅ್‌ದ್ ಇಬ್ನ್ ಅಬೀ ವಕ್ಕಾಸ್, ಅಬೂ ಹುರೈರ, ಅಲ್‌ಹಸನ್ ಇಬ್ನ್ ಅಲೀ ಮುಂತಾದ ಸಹಾಬಾಗಳು ಇದೇ ಅಭಿಪ್ರಾಯ ಹೊಂದಿದ್ದಾರೆ.

ಉರ್ವ ಇಬ್ನು ಝ್ಝುಬೈರ್, ಸಈದ್ ಇಬ್ನ್ ಜುಬೈರ್, ಸುಫ್ಯಾನ್ ಅಸ್ಸೌರೀ ಮುಂತಾದ ತಾಬಿಊನ್‌ಗಳೂ ಇದೇ ಅಭಿಪ್ರಾಯದಲ್ಲಿದ್ದಾರೆ. ಅಲ್‌ಖತ್ತಾಬೀ ಕೂಡ ಇದೇ ಅಭಿಪ್ರಾಯ ಸ್ವೀಕರಿಸಿದ್ದಾರೆ. ಇವರು ಇದಕ್ಕೆ ಪುರಾ-ವೆಯಾಗಿ "ಪ್ರವಾದಿ(ﷺ) ಯವರು ಇಹ್ರಾಂನಲ್ಲಿರುವಾಗ

ಮಅ್‌ಬೂದ್ 6/494-496; ತಹ್‌ಝೀಬು ಸ್ಸುನನ್ 6/495

ಹಿಜಾಮ ಮಾಡಿಕೊಳ್ಳುತ್ತಿದ್ದರು ಮತ್ತು ಉಪವಾಸದಲ್ಲಿರುವಾಗಲೂ ಹಿಜಾಮ ಮಾಡಿಕೊಳ್ಳುತ್ತಿದ್ದರು” ಎಂಬ ಇಬ್ನ್ ಅಬ್ಬಾಸ್(ﷺ)ರವರ ಹದೀಸನ್ನು ತೋರಿಸುತ್ತಾರೆ.[67]

29. ರಮದಾನ್ ತಿಂಗಳ ಚಂದ್ರದರ್ಶನವಾಯಿತೆಂದು ಹಗಲಿನ ವೇಳೆಯಲ್ಲಿ ತಿಳಿದು ಬಂದರೆ ಏನು ಮಾಡಬೇಕು?

ರಮದಾನ್ ತಿಂಗಳ ಚಂದ್ರದರ್ಶನವಾಯಿತೆಂದು (ಇಂದಿನಿಂದ ರಮದಾನ್ ತಿಂಗಳು ಆರಂಭವಾಯಿತೆಂದು) ಹಗಲಿನ ಮಧ್ಯಭಾಗದಲ್ಲಿ ತಿಳಿದು ಬಂದರೆ, ಉಪವಾಸ ಆಚರಿಸಲು ಕಡ್ಡಾಯವಿರುವ ಎಲ್ಲರೂ ರಮದಾನ್ ತಿಂಗಳನ್ನು ಗೌರವಿಸುವ ಸಲುವಾಗಿ ಆ ದಿನದ ಉಳಿದ ಭಾಗದಲ್ಲಿ ಉಪವಾಸ ಆಚರಿಸಬೇಕು. ಇದು ಕಡ್ಡಾಯವಾಗಿದೆ. ಮಾತ್ರವಲ್ಲ, ಉಲಮಾಗಳ ಅಭಿಪ್ರಾಯಗಳ ಪೈಕಿ ಅತ್ಯಂತ ಸಹೀಹಾದ ಅಭಿಪ್ರಾಯ

67 ಫತ್‌ಹುಲ್ ಬಾರಿ 4/174; ಔನುಲ್ ಮಅ್‌ಬೂದ್ 6/498-499

ಪ್ರಕಾರ ಆ ದಿನದ ಉಪವಾಸವನ್ನು ಕಝಾ ನಿರ್ವಹಿಸುವುದು ಕೂಡ ಕಡ್ಡಾಯವಾಗಿದೆ. ಇನ್ನು ರಮದಾನ್ ತಿಂಗಳ ಆರಂಭವಾಯಿತು ಎಂದು ತಿಳಿದುಬಂದದ್ದು ಬೆಳಗ್ಗಿನ ಉಪಹಾರ ಸೇವಿಸುವುದಕ್ಕೆ ಮುಂಚೆಯಾದರೂ ಉಪಹಾರ ಸೇವಿಸಿದ ನಂತರವಾದರೂ ಅದರಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಆ ದಿನದ ಉಪವಾಸವನ್ನು ಕಝಾ ನಿರ್ವಹಿಸುವುದು ಕಡ್ಡಾಯವಾಗಿದೆ. ಕಾರಣ, ಅಬೂದಾವೂದ್ ಮತ್ತು ಅನ್ನಸಾಈ ಉಲ್ಲೇಖಿಸಿದ ಹದೀಸಿನಲ್ಲಿ ಇದನ್ನು ಸ್ಪಷ್ಟವಾಗಿ ಹೇಳಲಾಗಿದೆ. ಆ ಹದೀಸಿನಲ್ಲಿರುವಂತೆ ಅಸ್ಲಂ ಜನಾಂಗದವರು ಪ್ರವಾದಿ(ﷺ) ಯವರ ಬಳಿಗೆ ಬಂದಾಗ ಪ್ರವಾದಿ(ﷺ) ಯವರು ಕೇಳುತ್ತಾರೆ: “ನೀವು ಈ ದಿನ ಉಪವಾಸ ಆಚರಿಸಿದ್ದೀರಾ?” ಅವರು ಇಲ್ಲವೆನ್ನುತ್ತಾರೆ. ಆಗ ಪ್ರವಾದಿ(ﷺ) ಯವರು ಹೇಳುತ್ತಾರೆ:

«فَأَتِمُّوا بَقِيَّةَ يَوْمِكُمْ وَاقْضُوهُ».

“ನೀವು ಈ ದಿನದ ಉಳಿದ ಭಾಗದಲ್ಲಿ ಉಪವಾಸ ಆಚರಿಸಿರಿ ಮತ್ತು ಈ ದಿನದ ಉಪವಾಸವನ್ನು ಕಝಾ ನಿರ್ವಹಿಸಿರಿ.”[68]

ರಮದಾನ್ ತಿಂಗಳ ಹಗಲಿನಲ್ಲಿ ಮಕ್ಕಳು ಪ್ರೌಢರಾದರೆ, ಹುಚ್ಚನ ಬುದ್ಧಿಭ್ರಮಣೆ ನಿವಾರಣೆಯಾದರೆ, ಉಪವಾಸ ಆಚರಿಸದ ಯಾತ್ರಿಕ ಊರಿಗೆ ಮರಳಿದರೆ, ಉಪವಾಸ ಆಚರಿಸದ ರೋಗಿಯ ಕಾಯಿಲೆ ವಾಸಿಯಾದರೆ, ಋತುಸ್ರಾವ ಮತ್ತು ಹೆರಿಗೆ ರಕ್ತವಿರುವ ಮಹಿಳೆಯರು ಶುದ್ಧಿಯಾದರೆ, ಸತ್ಯನಿಷೇಧಿ ಮುಸ್ಲಿಮನಾದರೆ ಅವರು ಆ ವೇಳೆಯನ್ನು ಗೌರವಿಸಿ ಆ ದಿನದ ಉಳಿದ ಭಾಗದಲ್ಲಿ ಉಪವಾಸ ಆಚರಿಸಬೇಕು ಮತ್ತು ಆ ದಿನದ ಉಪವಾಸವನ್ನು ಕಝಾ ನಿರ್ವಹಿಸಬೇಕು. ಇದು ವಿದ್ವಾಂಸರ ಅತ್ಯಂತ ಸರಿಯಾದ ಅಭಿಪ್ರಾಯವಾಗಿದೆ. ರಮದಾನ್ ತಿಂಗಳ ಉಪವಾಸದ ನಿಯ್ಯತ್ ಹೇಳಲು ಮರೆತವರು

68 ನೋಡಿ: ಫತ್‌ಹುಲ್ ಬಾರಿ 4/142

ನಿಯ್ಯತ್ ಹೇಳಲಿಲ್ಲವೆಂದು ಹಗಲಿನ ವೇಳೆಯಲ್ಲಿ ನೆ-ನಪಾದರೆ ಅವರು ಸಹ ಆ ದಿನದ ಉಳಿದ ಭಾಗದಲ್ಲಿ ಉಪವಾಸ ಆಚರಿಸಬೇಕು ಮತ್ತು ಆ ಉಪವಾಸವನ್ನು ಕಝಾ ನಿರ್ವಹಿಸಬೇಕು. ಸೆರೆಯಲ್ಲಿದ್ದ ವ್ಯಕ್ತಿಗೆ ರಮದಾನ್ ತಿಂಗಳು ಕಳೆದದ್ದೇ ಗೊತ್ತಾಗದಿದ್ದರೆ, ಅಥವಾ ರಮದಾನ್ ತಿಂಗಳ ಕೆಲವು ದಿನ ಕಳೆದ ಬಳಿಕ ಗೊತ್ತಾದರೆ ಬಿಟ್ಟು-ಹೋದ ಆ ಉಪವಾಸಗಳನ್ನು ನಂತರ ಕಝಾ ನಿರ್ವ-ಹಿಸಬೇಕು. ಆದರೆ ಉಪವಾಸ ತೊರೆದದ್ದಕ್ಕೆ ಅವರಿಗೆ ದೋಷವಿಲ್ಲ. ಕಾರಣ ಅವರಿಗೆ ವಿನಾಯಿತಿಯಿದೆ.

ಆ ದಿನದ ಉಳಿದ ಭಾಗದಲ್ಲಿ ಉಪವಾಸ ಆಚರಿಸುವುದು ಕಡ್ಡಾಯವಲ್ಲ ಮತ್ತು ಆ ದಿನದ ಉಪವಾಸವನ್ನು ಕಝಾ ನಿರ್ವಹಿಸುವುದು ಕೂಡ ಕಡ್ಡಾಯವಲ್ಲ ಎಂದು ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಆ ದಿನದ ಉಳಿದ ಭಾಗದಲ್ಲಿ ಉಪವಾಸ ಆಚರಿಸುವುದು ಕಡ್ಡಾಯ. ಆದರೆ ಆ ದಿನದ ಉಪವಾಸವನ್ನು ಕಝಾ ನಿರ್ವಹಿಸುವುದು

ಕಡ್ಡಾಯವಲ್ಲ ಎಂಬ ಮೂರನೇ ಅಭಿಪ್ರಾಯವೂ ಇದೆ. ಶೈಖುಲ್ ಇಸ್ಲಾಂ ಇಬ್ನ್ ತೈಮಿಯ್ಯಃ ಮತ್ತು ಅವರ ಶಿಷ್ಯ ಇಬ್ನುಲ್ ಕಯ್ಯಿಂ ಈ ಮೂರನೇ ಅಭಿಪ್ರಾಯವನ್ನು ಆರಿಸಿದ್ದಾರೆ.

30. ಉಪವಾಸ ಬಾಕಿಯಿರುವವರು ಮರಣಹೊಂದಿದರೆ ಏನು ಮಾಡಬೇಕು?

ರಮದಾನ್ ತಿಂಗಳ ಉಪವಾಸ, ಹರಕೆಯ ಉಪವಾಸ, ಪ್ರಾಯಶ್ಚಿತ್ತದ ಉಪವಾಸ ಮುಂತಾದ ಕಡ್ಡಾಯ ಉಪ-ವಾಸಗಳು ನಿರ್ವಹಿಸಲು ಬಾಕಿಯಿರುವ ವ್ಯಕ್ತಿ ಮರಣ-ಹೊಂದಿದರೆ, ಅಂದರೆ ಆ ಉಪವಾಸಗಳನ್ನು ಕಝಾ ನಿರ್ವಹಿಸಲು ಸಾಧ್ಯವಾಗುವುದಕ್ಕೆ ಮೊದಲೇ ಮರ-ಣಹೊಂದಿದರೆ, ಉದಾಹರಣೆಗೆ ರೋಗ ವಾಸಿಯಾ-ಗುವುದಕ್ಕೆ ಮೊದಲೇ ಮರಣಹೊಂದಿದರೆ, ಅಥವಾ ಯಾತ್ರೆಯಿಂದ ಮರಳುವುದಕ್ಕೆ ಮುಂಚೆಯೇ ಮರಣ ಹೊಂದಿದರೆ, ಆ ಉಪವಾಸಗಳನ್ನು ಕಝಾ ನಿರ್ವಹಿಸ-

ಬೇಕಾಗಿಲ್ಲ. ಕಾರಣ, ಅವರಿಗೆ ಉಪವಾಸ ಕಝಾ ನಿರ್ವಹಿಸಲಾಗದ ಕಾರಣ, ಅವರು ಅಲ್ಲಾಹನ ಈ ವಚನದ ವ್ಯಾಪ್ತಿಯಲ್ಲಿ ಒಳಪಡುವುದಿಲ್ಲ.

﴿فَمَن كَانَ مِنكُم مَّرِيضًا أَوْ عَلَىٰ سَفَرٍ فَعِدَّةٌ مِّنْ أَيَّامٍ أُخَرَ﴾

"ನಿಮ್ಮಲ್ಲಿ ಯಾರಾದರೂ ರೋಗಿಯಾಗಿದ್ದರೆ ಅಥವಾ ಯಾತ್ರೆಯಲ್ಲಿದ್ದರೆ ಅವರು ಆ ಸಂಖ್ಯೆಯನ್ನು (ಉಪವಾಸವನ್ನು) ಇತರ ದಿನಗಳಲ್ಲಿ (ಪೂರ್ತಿ ಮಾಡಬೇಕು)."[69]

ಆದರೆ ಅವರಿಗೆ ಆ ಉಪವಾಸಗಳನ್ನು ಕಝಾ ನಿರ್ವಹಿಸಲು ಸಾಧ್ಯವಿದ್ದೂ ಸಹ ಅವರು ಕಝಾ ನಿರ್ವಹಿಸದೆ ಮರಣಹೊಂದಿದರೆ, ವಿದ್ವಾಂಸರ ಅತ್ಯಂತ ಸಹೀಹಾದ ಅಭಿಪ್ರಾಯ ಪ್ರಕಾರ ಅವರ ಹತ್ತಿರದ ಸಂಬಂಧಿಕರು ಆ ಉಪವಾಸಗಳನ್ನು ಕಝಾ ನಿರ್ವಹಿಸಬೇಕು. ಅದು

69 ಕುರ್‌ಆನ್ 2:184

ರಮದಾನ್ ತಿಂಗಳ ಉಪವಾಸವಾಗಿದ್ದರೂ, ಹರಕೆಯ ಉಪವಾಸವಾಗಿದ್ದರೂ, ಪ್ರಾಯಶ್ಚಿತ್ತದ ಉಪವಾಸವಾಗಿದ್ದರೂ ಅದರಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಕಾರಣ, ಸಹೀಹುಲ್ ಬುಖಾರಿ ಮತ್ತು ಸಹೀಹ್ ಮುಸ್ಲಿಂನಲ್ಲಿರುವ ಆಯಿಶಾ(﵅) ರವರ ಹದೀಸಿನಲ್ಲಿ ಪ್ರವಾದಿ (ﷺ) ಯವರು ಹೇಳುತ್ತಾರೆ:

«مَنْ مَاتَ وَعَلَيْهِ صِيَامٌ صَامَ عَنْهُ وَلِيُّهُ».

"ಉಪವಾಸ ಬಾಕಿಯಿದ್ದು ಮರಣಹೊಂದಿದವರ ಉಪವಾಸಗಳನ್ನು ಅವರ ಸಂಬಂಧಿಕರು ಕಝಾ ನಿರ್ವಹಿಸಬೇಕು."[70]

ಇದು ರಮದಾನ್ ತಿಂಗಳ ಉಪವಾಸ, ಹರಕೆಯ ಉಪವಾಸ, ಪ್ರಾಯಶ್ಚಿತ್ತದ ಉಪವಾಸ ಮುಂತಾದ

70 ಅಲ್‌ಬುಖಾರಿ. ನೋಡಿ: ಫತ್‌ಹುಲ್ ಬಾರಿ 4/192; ಮುಸ್ಲಿಂ. ನೋಡಿ: ಶರ್ಹ್ ನ್ನವವೀ ಅಲಾ ಮುಸ್ಲಿಂ 8/23

ಎಲ್ಲ ಕಡ್ಡಾಯ ಉಪವಾಸಗಳಿಗೂ ಅನ್ವಯವಾಗುತ್ತದೆ. ಬಹುಸಂಖ್ಯಾತ ವಿದ್ವಾಂಸರ ಅಭಿಪ್ರಾಯ ಪ್ರಕಾರ ಇದು ಕಡ್ಡಾಯ ಆದೇಶವಲ್ಲ. ಬದಲಾಗಿ ಪ್ರೋತ್ಸಾಹದ ಆದೇ-ಶವಾಗಿದೆ. ಕಾರಣ, ಅಲ್ಲಾಹು ಹೇಳುತ್ತಾನೆ:

﴿ لَا يُكَلِّفُ ٱللَّهُ نَفْسًا إِلَّا وُسْعَهَاۚ ﴾

"ಒಬ್ಬ ವ್ಯಕ್ತಿಯ ಮೇಲೆ ಅವನ ಸಾಮರ್ಥ್ಯಕ್ಕಿಂತಲೂ ಹೆ-ಚ್ಚಿನದ್ದನ್ನು ಅಲ್ಲಾಹು ಕಡ್ಡಾಯಗೊಳಿಸುವುದಿಲ್ಲ."[71]

ಹದೀಸಿನಲ್ಲಿ ಹೇಳಲಾದ ವಲಿಯ್ಯ್ ಎಂದರೆ: ಹತ್ತಿರದ ಸಂಬಂಧಿಕರು. ಹತ್ತಿರದ ಮತ್ತು ದೂರದ ಎಲ್ಲ ಸಂ-ಬಂಧಿಕರೂ ಇದರಲ್ಲಿ ಒಳಪಡುತ್ತಾರೆಂದು ಕೆಲವರು ಅಭಿಪ್ರಾಯಪಡುತ್ತಾರೆ. ವಾರೀಸು ಹಕ್ಕು ಇರುವವರು ಮಾತ್ರವೆಂದು ಇತರ ಕೆಲವರು ಅಭಿಪ್ರಾಯಪಡುತ್ತಾರೆ. ಸರಿಯಾದ ಅಭಿಪ್ರಾಯ ಮೊದಲನೇ ಅಭಿಪ್ರಾಯವಾ-

71 ಕುರ್‌ಆನ್ 2:286

ಗಿದೆ. ಅಂದರೆ ಹತ್ತಿರದ ಸಂಬಂಧಿಕರು. ಆ ಪದದ ಬಾಹ್ಯಾರ್ಥವು ಇದನ್ನೇ ಸೂಚಿಸುತ್ತದೆ. ಈ ಹದೀಸಿನ ಪ್ರಕಾರ ಹತ್ತಿರದ ಸಂಬಂಧಿಕರು ಮಾತ್ರ ಉಪವಾಸ ಆಚರಿಸಬೇಕು ಎಂದಲ್ಲ. ಬದಲಾಗಿ ಯಾರೂ ಸಹ ಅವರ ಪರವಾಗಿ ಉಪವಾಸ ಆಚರಿಸಬಹುದು. ಆದರೆ ಹತ್ತಿರದ ಸಂಬಂಧಿಕರು ಉಪವಾಸ ಆಚರಿಸುವುದು ಉತ್ತಮ. ಕಾರಣ ಅದು ಸದ್ವರ್ತನೆಯ ಒಂದು ಭಾಗವಾಗಿದೆ.

ಆದ್ದರಿಂದ ಮೃತವ್ಯಕ್ತಿಯ ಪರವಾಗಿ ಹತ್ತಿರದ ಸಂಬಂಧಿಕರು ಉಪವಾಸ ಆಚರಿಸುವುದು ಪ್ರೋತ್ಸಾಹನೀಯವಾಗಿದೆ. ಇವರು ಉಪವಾಸ ಆಚರಿಸಿದರೆ ಮೃತವ್ಯಕ್ತಿಯ ಋಣವು ತೀರುತ್ತದೆ. ಉಪವಾಸ ಆಚರಿಸುವುದಕ್ಕೆ ಬದಲು ಪ್ರತಿಯೊಂದು ಉಪವಾಸಕ್ಕೆ ಬದಲಿಯಾಗಿ ಒಬ್ಬೊಬ್ಬ ಬಡವನಿಗೆ ಆಹಾರ ಕೊಡಬಹುದು. ಉಪವಾಸ ಆಚರಿಸುವುದು ಅಥವಾ ಆಹಾರ ಕೊಡುವುದು ಎಂಬ ಎರಡು ಆಯ್ಕೆ ಹತ್ತಿರದ ಸಂಬಂ-

ಧಿಕರಿಗಿದೆ. ಹೆಚ್ಚು ಬಲ್ಲವನು ಅಲ್ಲಾಹು.

الحركة النصيحة الإسلامية

ANNASEEHA ISLAMIC MOVEMENT

SURATKAL, MANGALORE - 575 014
MOB: 9731593091 / 9945171612

Jamiyathe Ahle Hadees
Mangalore